ನಿಮ್ಮೂರು ಸುದ್ದಿ

ಕನ್ನಡ ದಿನ ಪತ್ರಿಕೆ NIMMURU SUDDI

ಸಂಪಾದಕರು: ಸುಂದರ್ Editor : Sundar

ಏಕ ಕಾಲಕ್ಕೆ
ಬಳ್ಳಾರಿ,
ಕೊಪ್ಪಳ,
ಯಾದಗಿರಿ,
ರಾಯಚೂರು,
ಕಲಬುರ್ಗಿ,
ಬೀದರ,
ವಿಜಯನಗರ
ಜಿಲ್ಲೆಗಳಲ್ಲಿ ಪ್ರಕಟ

Volume: 01, Issue: 32 RNI Number : KNKAN/25/A2770 05-02-2026 Thursday Page 04, Price 2/- suddinimmuru@gmail.com Mob:-8660146563

ಸಂಪುಟ :01 ಸಂಚಿಕೆ :32 ರಾಯಚೂರು 05-02-2026 ಗುರುವಾರ ಪುಟ 04 ಬೆಲೆ ರೂ.2/- ಮೊ:8660146563

ಪಾಕಿಸ್ತಾನ ನಾಲಿಗೆ ಹೇಳಿಕೆ: ಒಂದು ದಿನದ ಮಟ್ಟಿಗೆ ಸಿ.ಟಿ.ರವಿ ಅಮಾನತು ಮಾಡಿದ ಸಭಾಪತಿ ಹೊರಟ್ಟಿ

ಬೆಂಗಳೂರು,ಫೆ.04–

ಪಾಕಿಸ್ತಾನದ ನಾಲಿಗೆ ಎಂದು ಹೇಳಿಕೆ ನೀಡಿದ್ದ ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಅವರನ್ನು ಈ ದಿನದ ಮಟ್ಟಿಗೆ ಅಮಾನತು ಮಾಡಲಾಗಿದೆ ಎಂದು ಸಭಾಪತಿ ಬಸವರಾಜ ಹೊರಟ್ಟಿ ತಿಳಿಸಿದ್ದಾರೆ.

ಕಾಂಗ್ರೆಸ್ ಸದಸ್ಯ ನಜೀರ್ ಅಹಮದ್, ಪ್ರಧಾನಿ ಮೋದಿ ಅವರನ್ನು ದೇಶದ್ರೋಹಿ ಎಂದು ಹೇಳಿರುವುದಕ್ಕೆ ಪ್ರತಿಯಾಗಿ ಕಿಡಿಕಾರಿದ್ದ ಸಿ.ಟಿ.ರವಿ ಪಾಕಿಸ್ತಾನ ನಾಲಿಗೆ ಮಾತ್ರ ಈ ತರಹ ಮಾತನಾಡುತ್ತದೆ ಎಂದು ಆಕ್ರೋಶ ಹೊರಹಾಕಿದ್ದರು.

ಆಡಳಿತ ಪಕ್ಷ ಇದಕ್ಕೆ ಆಕ್ಷೇಪಿಸಿ ಸಿ.ಟಿ.ರವಿ ಅವರು ವಿಷಾದ



ವ್ಯಕ್ತಪಡಿಸುವಂತೆ ಒತ್ತಾಯಿಸಿತು. ಇದೇ ವಿಚಾರವಾಗಿ ಇಂದು ಕರ್ನಾಟಕ ವಿಧಾನ ಪರಿಷತ್ ಕಾರ್ಯಕಲಾಪ ಹಾಗೂ ನಡವಳಿಕೆ ನಿಯಮದ 327ರ ಅಡಿಯಲ್ಲಿ ಕ್ರಮ ಕೈಗೊಳ್ಳುವಂತೆ ಕಾಂಗ್ರೆಸ್ ದೂರು ನೀಡಿತ್ತು.

ಈ ದೂರು ಪರಿಶೀಲಿಸಿದ ಸಭಾಪತಿ ಹೊರಟ್ಟಿ, ಸದನದಲ್ಲಿ ಗೈರಾಗಿದ್ದ ಸಿ.ಟಿ.ರವಿ ಅವರನ್ನು ರಾತ್ರಿ 8 ಗಂಟೆಯೊಳಗೆ ಕಲಾಪಕ್ಕೆ ಬರುವಂತೆ ವಿಪಕ್ಷದ ಮುಖ್ಯ ಸಚೇತಕ ರವಿಕುಮಾರ್ ಅವರಿಗೆ ನಿರ್ದೇಶಿಸಿದರು. ಗಡುವು ಮುಗಿದರೂ ಹಾಜರಾಗದಿದ್ದರಿಂದ ಸಿ.ಟಿ. ರವಿ ಅವರನ್ನು ಈ ದಿನದ ಮಟ್ಟಿಗೆ ಅಮಾನತು ಮಾಡಿರುವುದಾಗಿ ಸಭಾಪತಿಗಳು ನಿರ್ಧಾರ ಪ್ರಕಟಿಸಿದರು.

ಇಂದು ಬೆಳಗ್ಗೆ ಸದನ ಆರಂಭವಾಗುತ್ತಿದ್ದಂತೆ ರವಿ ಅವರು ವಿಷಾದ ವ್ಯಕ್ತಪಡಿಸಬೇಕೆಂದು ಸರ್ಕಾರ ಪಟ್ಟು ಹಿಡಿದಿತ್ತು. ಇದಕ್ಕೆ ಪ್ರತಿಪಕ್ಷಗಳು ಮಣಿಯದ ಪರಿಣಾಮ ಪರಸ್ಪರ ವಾಗ್ವಾದ ನಡೆಯಿತು. ಭೋಜನ ವಿರಾಮದ ಬಳಿಕ ಆಡಳಿತ ಪಕ್ಷದ ನಾಯಕ ಎನ್.ಎಸ್.ಭೋಸರಾಜ್ ಅವರು ಸಿ.ಟಿ.ರವಿ ಅವರನ್ನು ಅಮಾನತು ಮಾಡಬೇಕೆಂದು ನಿರ್ಣಯ ಮಂಡಿಸಿದರು. ಈ ವೇಳೆ ಗೈರಾಗಿದ್ದ ರವಿ ಅವರನ್ನು ಕರೆಯಿಸಿ ಅವರ ಸ್ಪಷ್ಟೀಕರಣ ಪಡೆದ ಬಳಿಕ ಸೂಕ್ತ ಕ್ರಮ ಕೈಗೊಳ್ಳಲಾಗುವುದು. ರಾತ್ರಿ 8 ಗಂಟೆಯೊಳಗೆ ಸಿ.ಟಿ.ರವಿ ಕಲಾಪಕ್ಕೆ ಬರುವಂತೆ ಸಭಾಪತಿಗಳು ಪ್ರತಿಪಕ್ಷಕ್ಕೆ ನಿರ್ದೇಶಿಸಿದರು.

ಅಂತಿಮ ಗಡುವು ಮುಗಿದರೂ ಕಲಾಪಕ್ಕೆ ಬರದಿರುವುದನ್ನು ಕಂಡು ಮಾತನಾಡಿದ ಹೊರಟ್ಟಿ, ಈ ದಿನದ

3ನೇ ಪುಟಕ್ಕೆ

ಮಣಿಪುರದಲ್ಲಿ ರಾಷ್ಟ್ರಪತಿ ಆಳ್ವಿಕೆ ಮುಕ್ತಾಯ, ಬಿಜೆಪಿ ಸರ್ಕಾರ ಅಸ್ತಿತ್ವಕ್ಕೆ; ನೂತನ ಸಿಎಂ ಆಗಿ ಖೇಮ್‌ಚಂದ್ ಸಿಂಗ್ ಪ್ರಮಾಣ

ಇಂಫಾಲ(ಮಣಿಪುರ): ಮಣಿಪುರದ ನೂತನ ಮುಖ್ಯಮಂತ್ರಿಯಾಗಿ ಬಿಜೆಪಿ ನಾಯಕ ವೈ.ಖೇಮ್‌ಚಂದ್ ಸಿಂಗ್ ಅವರು ಇಂದು ಪ್ರಮಾಣವಚನ ಸ್ವೀಕರಿಸಿದ್ದಾರೆ.

ರಾಜ್ಯಪಾಲ ಅಜಯ್ ಕುಮಾರ್ ಭಲ್ಲಾ ಅವರು ನೂತನ ಮುಖ್ಯಮಂತ್ರಿಗೆ ಅಧಿಕಾರ ಮತ್ತು ಗೌಪ್ಯತೆಯ ಪ್ರಮಾಣವಚನ ಬೋಧಿಸಿದರು.

ಮಣಿಪುರದಲ್ಲಿ ರಾಷ್ಟ್ರಪತಿ ಆಳ್ವಿಕೆ ರದ್ದುಗೊಳಿಸಿದ ಕೆಲವೇ ಗಂಟೆಗಳ ಬಳಿಕ ಇಲ್ಲಿನ ಲೋಕ ಭವನದಲ್ಲಿ ಪ್ರಮಾಣವಚನ ಸ್ವೀಕಾರ ಸಮಾರಂಭ ನಡೆಯಿತು.



ಬಿಜೆಪಿ ಶಾಸಕರು, ರಾಜ್ಯ ಎನ್‌ಡಿಎಯ ಉನ್ನತ ನಾಯಕರು ಮತ್ತು ಪಕ್ಷದ ಹಿರಿಯ ಕಾರ್ಯಕರ್ತರು ಸಮಾರಂಭದಲ್ಲಿ ಪಾಲ್ಗೊಂಡಿದ್ದರು.

2025ರ ಫೆಬ್ರವರಿ 13ರಿಂದ ಮಣಿಪುರದಲ್ಲಿ ರಾಷ್ಟ್ರಪತಿ ಆಳ್ವಿಕೆ ಜಾರಿಯಲ್ಲಿದೆ. 2027ರವರೆಗೆ ಅಧಿಕಾರಾವಧಿ ಹೊಂದಿರುವ 60 ಸದಸ್ಯರ ವಿಧಾನಸಭೆಯನ್ನು ರಾಷ್ಟ್ರಪತಿ ಆಳ್ವಿಕೆ ಹೇರಿದ ನಂತರ ಅಮಾನತಿನಲ್ಲಿ ಇಡಲಾಯಿತು.

ಪ್ರಸ್ತುತ ಮಣಿಪುರದಲ್ಲಿ 37 ಬಿಜೆಪಿ ಶಾಸಕರಿದ್ದಾರೆ. 2022ರ ವಿಧಾನಸಭಾ ಚುನಾವಣೆಯಲ್ಲಿ 32 ಬಿಜೆಪಿ ಅಭ್ಯರ್ಥಿಗಳು ಗೆದ್ದಿದ್ದರು. ಜೆಡಿ(ಯು) ಆರು ಸ್ಥಾನಗಳನ್ನು ಗೆದ್ದಿತ್ತು. ಆದರೆ, ನಂತರದ ಬೆಳವಣಿಗೆಯಲ್ಲಿ ಈ ಪಕ್ಷದ ಐವರು ಶಾಸಕರು ನಂತರ ಬಿಜೆಪಿಗೆ ಪಕ್ಷಾಂತರಗೊಂಡಿದ್ದರು. ಇತರರಲ್ಲಿ ಆರು ಮಂದಿ ಎನ್‌ಪಿಪಿ, ಐದು ಮಂದಿ ಎನ್‌ಪಿಎಫ್, ಐದು ಮಂದಿ ಕಾಂಗ್ರೆಸ್, ಇಬ್ಬರು ಕುಕಿ ಪೀಪಲ್ಸ್ ಅಲೈಯನ್ಸ್, ಒಂದು ಜನತಾದಳ (ಯುನೈಟೆಡ್) ಮತ್ತು ಮೂವರು ಸ್ವತಂತ್ರರು ಇದ್ದಾರೆ. ಹಾಲಿ ಶಾಸಕರೊಬ್ಬರ ಮರಣದ ನಂತರ ಒಂದು ಸ್ಥಾನ ಖಾಲಿ ಇದೆ.

3ನೇ ಪುಟಕ್ಕೆ

ಫೆ.5 ಇಂದಿನಿದ ಮೂರು ದಿನಗಳ ಎಡೆದೊರೆ ನಾಡು ರಾಯಚೂರು ಜಿಲ್ಲಾ ಉತ್ಸವ-2026 ಆರಂಭ: ಸಿದ್ಧತೆ ಪೂರ್ಣ

ರಾಯಚೂರು ಫೆಬ್ರವರಿ 04–

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ರಾಯಚೂರು ಮಹಾನಗರ ಪಾಲಿಕೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಫೆ.05, 06, ಹಾಗೂ 07ರಂದು ನಿಗದಿಯಾದ ಎಡೆದೊರೆ ನಾಡು ರಾಯಚೂರು ಜಿಲ್ಲಾ ಉತ್ಸವ-2026ಕ್ಕೆ ಸರ್ವ ಸಿದ್ಧತೆಯಾಗಿದೆ.

ವಿವಿಧೆಡೆ ವೇದಿಕೆಗಳ ನಿರ್ಮಾಣ, ಪ್ರಚಾರ ಕಾರ್ಯ ಸೇರಿದಂತೆ ಇನ್ನಿತರ ಎಲ್ಲ ಕಾರ್ಯಗಳು ಸುಮಾರು ದಿನಗಳಿಂದಲೇ ಆರಂಭವಾಗಿ ಫೆ.4ರ ಸಂಜೆವರೆಗೆ ಬಿರುಸಿನಿಂದ ನಡೆದವು. ಫೆ.4ರ ಸಂಜೆ 7 ಗಂಟೆಗೆ ರಾಯಚೂರು ಕೃಷಿ ವಿಶ್ವವಿದ್ಯಾಲಯದ ಮುಖ್ಯ ವೇದಿಕೆಯ ನಿರ್ಮಾಣ ಕಾರ್ಯ ಪೂರ್ಣಗೊಂಡಿತು. ಮುಖ್ಯ ವೇದಿಕೆಯಲ್ಲಿ ಧ್ವನಿ ಮತ್ತು ಬೆಳಕಿನ ರಿಹರ್ಸಲ್ ನಡೆಯಿತು.

ಅದೇ ರೀತಿ, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದಿಂದ ಫೆ.5 ರಿಂದ ಫೆ.7ರವರೆಗೆ ನಿಗದಿಯಾದ ಕೃಷಿ ಮೇಳದ

ಮುಖ್ಯ ವೇದಿಕೆಯ ಪಕ್ಕದಲ್ಲಿನ ಆವರಣದಲ್ಲಿ ಎರಡನೇ ಮುಖ್ಯ ವೇದಿಕೆಯ ನಿರ್ಮಾಣ ಕಾರ್ಯವು ಸಹ ಫೆ.4ರ ಸಂಜೆವೇಳೆಗೆ ಪೂರ್ಣಗೊಂಡಿತು.

ಅದೇ ರೀತಿ, ರಾಯಚೂರು ಉತ್ಸವದ ಹಿನ್ನೆಲೆಯಲ್ಲಿ ಮುಖ್ಯವೇದಿಕೆಯ ಎದುರುಗಡೆಯ ಜಾಗದಲ್ಲಿ ಸುಸಜ್ಜಿತವಾಗಿ ನಿರ್ಮಾಣವಾದ ಆಹಾರ ಮೇಳದ ಮಳಿಗೆಗಳ ನಿರ್ಮಾಣ ಕಾರ್ಯವು ಸಹ ಫೆ.4ರ ಸಂಜೆ ಸಮಯಕ್ಕೆ ಪೂರ್ಣವಾಯಿತು.

ಕೃಷಿ ವಿಶ್ವವಿದ್ಯಾಲಯದ ಆವರಣದಲ್ಲಿನ ಫಲಪುಷ್ಪ ಪ್ರದರ್ಶನ, ಮತ್ಸ್ಯ ಮೇಳ, ಕೈಗಾರಿಕಾ ಕರಕುಶಲ ಪ್ರದರ್ಶನದ ವೇದಿಕೆ ಸೇರಿದಂತೆ ಜಿಲ್ಲಾ ರಂಗಮಂದಿರ, ಜಗಜ್ಯೋತಿ ಬಸವೇಶ್ವರ ಆಡಿಟೋರಿಯಂ ಹಾಲ್, ಮಹಿಳಾ ಸಮಾಜ ಆವರಣದಲ್ಲಿನ ವೇದಿಕೆಯ ನಿರ್ಮಾಣ, ಅಲಂಕಾರ ಸಿದ್ಧತಾ ಕಾರ್ಯಗಳು ಸಹ ಪೂರ್ಣವಾಗಿ ಫೆ.5ರಿಂದ ಕಾರ್ಯಕ್ರಮಗಳು ಆಯಾ ವೇದಿಕೆಗಳಲ್ಲಿ ಆರಂಭವಾಗಲಿವೆ.

ಜಿಲ್ಲಾಧಿಕಾರಿಗಳ ಸೂಚನೆ: ಫೆ.3ರಂದು ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜಿಲ್ಲಾ ಪಂಚಾಯತ್ ಸಿಇಓ ಈಶ್ವರ ಕಾಂದೂ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅರುಣಾಂಗ್ಶು ಗಿರಿ, ಮಹಾನಗರ ಪಾಲಿಕೆಯ ಆಯುಕ್ತರಾದ ಜುಬಿನ್ ಮೊಹಪಾತ್ರ ಅವರ ಸಮ್ಮುಖದಲ್ಲಿ ಜಿಲ್ಲಾಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳೊಂದಿಗೆ ಅಂತಿಮ ಹಂತದ ಸಿದ್ಧತಾ ಸಭೆ ನಡೆಸಿದ ಜಿಲ್ಲಾಧಿಕಾರಿಗಳಾದ ನಿತೀಶ್ ಕೆ ಅವರು ಮಾತನಾಡಿ, ಹಗಲಿರುಳು ಶ್ರಮಿಸಿ ಉತ್ಸವದ ಸಿದ್ಧತೆಯಲ್ಲಿ ತೊಡಗಿದ ಅಧಿಕಾರಿಗಳು ಫೆ.5, ಫೆ.6 ಹಾಗೂ ಫೆ.7ರಂದು ಮೂರು ದಿನಗಳ ಕಾಲವು ಸಹ ಅಷ್ಟೇ ಜಾಗ್ರತೆ ವಹಿಸಿ ಉತ್ಸವದ ಎಲ್ಲ ಕಾರ್ಯಗಳು ಸಮಯಕ್ಕೆ ಸರಿಯಾಗಿ ನಡೆಯುವಂತೆ ನೋಡಿಕೊಂಡು ಕಾರ್ಯಕ್ರಮದ

3ನೇ ಪುಟಕ್ಕೆ





ರಾಯಚೂರು ಬೈಸ್ಕೆ ವಿಶೇಷ ಹೆಲಿಕ್ಯಾಪ್ಟರ್ ರೈಡ್‌ಗೆ ಜಿಲ್ಲಾಧಿಕಾರಿಗಳಾದ ನಿತೀಶ್ ಕೆ ಚಾಲನೆ

ರಾಯಚೂರು ಫೆಬ್ರವರಿ 04

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಾನಗರ ಪಾಲಿಕೆ ರಾಯಚೂರು ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಎಡೆದೊರೆ ನಾಡು ರಾಯಚೂರು ಜಿಲ್ಲಾ ಉತ್ಸವ-2026ರ ಅಂಗವಾಗಿ ರಾಯಚೂರು ಜಿಲ್ಲೆಯ ನಾಗರೀಕರಿಗೆ ಬಾನಂಗಳದಿಂದ ರಾಯಚೂರು ವೀಕ್ಷಣೆಗೆ ರಾಯಚೂರು ಬೈಸ್ಕಯ್ ಎಂಬ ವಿಶೇಷ ಹೆಲಿಕ್ಯಾಪ್ಟರ್ ರೈಡ್ ಕಾರ್ಯಕ್ರಮಕ್ಕೆ ಜಿಲ್ಲಾಧಿಕಾರಿಗಳಾದ ನಿತೀಶ್ ಕೆ. ಅವರು ಫೆ.4ರಂದು ಚಾಲನೆ ನೀಡಿದರು.

ನಗರದ ಮಹಾತ್ಮಗಾಂಧಿ ಜಿಲ್ಲಾ ಕ್ರೀಡಾಂಗಣದಲ್ಲಿ ಹೆಲಿಕ್ಯಾಪ್ಟರ್ ರೈಡ್ ಆರಂಭವಾಗುತ್ತಿದ್ದತೆ ನೆರೆದಿದ್ದ ಗಣ್ಯರು, ಸಾರ್ವಜನಿಕರು ಮತ್ತು ವಿದ್ಯಾರ್ಥಿಗಳು ಸಿಳ್ಳೆ ಹಾಕಿ



ಸಂಭ್ರಮಿಸಿದರು.

ಹೆಲಿಕ್ಯಾಪ್ಟರ್ ರೈಡ್ ಕಾರ್ಯಕ್ರಮದಲ್ಲಿ ರಾಯಚೂರಿನ ಬಾಲಕಿಯರ ಸರ್ಕಾರಿ ಬಾಲ ಮಂದಿರದ 9ನೇ ತರಗತಿಯ ವಿದ್ಯಾರ್ಥಿನಿಯರಾದ ಲಕ್ಷ್ಮೀ, ನಾಗವೇಣಿ ಹಾಗೂ 10ನೇ ತರಗತಿಯ ಶಿವಕಲಾ ಸೇರಿದಂತೆ ಬಾಲಕಿಯರ ಸರ್ಕಾರಿ ಬಾಲ ಮಂದಿರದ ಅಧೀಕ್ಷಕಿ ಭಾರತಿ ನಾಯಕ ಅವರು ಮೊದಲ ಬಾರಿಗೆ ಹೆಲಿಕ್ಯಾಪ್ಟರ್ ಏರಿ ಪ್ರಯಾಣಿಸಿದರು.

ವಿಶೇಷ ಹೆಲಿಕ್ಯಾಪ್ಟರ್ ರೈಡ್ ಕಾರ್ಯಕ್ರಮದಲ್ಲಿ ರಾಯಚೂರು ಸಿಟಿಯ ಮೇಲೇರಿದ ಹೆಲಿಕ್ಯಾಪ್ಟರ್ ರಾಯಚೂರು ಕೋಟೆ, ಮಾವಿನಕೆರೆ, ವೈಟಿಪಿಎಸ್ ಸೇರಿದಂತೆ ಇತರೆ ಸ್ಥಳಗಳಲ್ಲಿ ಸಂಚರಿಸುತ್ತಿರುವುದು ಕಂಡು ಬಂದಿತು.

ಸಾರ್ವಜನಿಕರಿಂದ ವೀಕ್ಷಣೆ: ರಾಯಚೂರು ಸಿಟಿ ಮೇಲೆ ಸುತ್ತಾಡುತ್ತಿದ್ದ ಹೆಲಿಕ್ಯಾಪ್ಟರನ್ನು ಶಕ್ತಿನಗರಿ ರಾಯಚೂರು ಸಿಟಿ ಹಾಗೂ ರಾಯಚೂರು ಗ್ರಾಮೀಣ ಪ್ರದೇಶದ ಜನತೆ ಆಕಾಶದತ್ತ ಕಣ್ಣುಹಾಯಿಸಿ ವೀಕ್ಷಣೆ ನಡೆಸಿ ಸಂಭ್ರಮಿಸಿದರು.

ಇದೇ ಸಂದರ್ಭದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಅರುಣಾಂಗ್ಶು ಗಿರಿ, ಜಿಲ್ಲಾ ಪಂಚಾಯತ್ ಸಿಇಓ ಈಶ್ವರ ಕಾಂದೂ, ಅಪರ ಜಿಲ್ಲಾಧಿಕಾರಿ ಶಿವಾನಂದ,

3ನೇ ಪುಟಕ್ಕೆ

ಫೆ.10 ರಂದು ಕಾಯಕ ಶರಣರ ಜಯಂತಿ: ಪೂರ್ವಭಾವಿ ಸಭೆ

ರಾಯಚೂರು ಫೆ.04 –

ಜಿಲ್ಲಾಡಳಿತದಿಂದ ಫೆ.10 ರಂದು ಕಾಯಕ ಶರಣರ ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಣೆ ಮಾಡಲು ಅಗತ್ಯ ಸಿದ್ಧತೆ ಕೈಗೊಳ್ಳಬೇಕು ಎಂದು ಜಿಲ್ಲಾಧಿಕಾರಿಗಳ ಕಚೇರಿಯ ತಹಶೀಲ್ದಾರ್ ಜಗದ್ದೀಶ್ ಅವರು ಹೇಳಿದರು.

ನಗರದ ನೂತನ ಜಿಲ್ಲಾಧಿಕಾರಿ ಕಚೇರಿಗಳ ಕಚೇರಿಯ ಸಭಾಂಗಣದಲ್ಲಿ ಫೆ.4ರಂದು ನಡೆದ ಕಾಯಕ ಶರಣರ ಜಯಂತಿಯ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಫೆ.10ರಂದು ಸರ್ಕಾರವು ಕಾಯಕ ಶರಣರಾದ ಮಾದಾರ ಚನ್ನಯ್ಯ, ಮಾದಾರ ದೂಳಯ್ಯ, ಉರಿಲಿಂಗ ಪೆದ್ದಿ, ಡೋಹರ ಕಕ್ಕಯ್ಯ ಹಾಗೂ ಸಮಗಾರ ಹರಳಯ್ಯ ಅವರ ಜಯಂತಿಯನ್ನು ಕಾಯಕ ಶರಣರ



ಜಯಂತಿಯನ್ನಾಗಿ ಆಚರಣೆ ಮಾಡಲಾಗುತ್ತಿದೆ.

ಅಂದು ಬೆಳಿಗ್ಗೆ 11 ಗಂಟೆಯಿದ ನಗರದ ಅಂಬೇಡ್ಕರ್ ವೃತ್ತದಿಂದ ಶರಣರ ಭಾವಚಿತ್ರಗಳ ಮೆರವಣಿಗೆ ನಡೆಯಲಿದೆ. ಬಳಿಕ ಮಧ್ಯಾಹ್ನ 12 ಗಂಟೆಗೆ ನಗರದ ರಂಗಮದಿರದಲ್ಲಿ ವೇದಿಕೆ ಕಾರ್ಯಕ್ರಮ ಇರುತ್ತದೆ. ಈ ಕಾರ್ಯಕ್ರಮದಲ್ಲಿ ಶರಣರ ಕುರಿತು ಉಪನ್ಯಾಸ ಏರ್ಪಡಿಸಲಾಗುತ್ತಿದ್ದು, ಕಾಯಕ ಶರಣರ ಜಯಂತಿಯು ಅಚ್ಚುಕಟ್ಟಾಗಿ ನಡೆಯುವಂತೆ ನೋಡಿಕೊಳ್ಳಲು ಸಂಬಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಈ ಜಯಂತಿಗೆ ಕಡ್ಡಾಯವಾಗಿ ಎಲ್ಲಾ ಅಧಿಕಾರಿಗಳು ಮತ್ತು ಸಿಬ್ಬಂದಿಯು ಹಾಜರಾಗಬೇಕು ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಉತ್ತರಾದೇವಿ, ಕೃಷಿ ಇಲಾಖೆ ಸಹಾಯಕ ನಿರ್ದೇಶಕರಾದ ಪುಷ್ಪಲತಾ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ವ್ಯವಸ್ಥಾಪಕರಾದ ಶರಣಮ್ಮ, ಸಮಾಜದ ಮುಖಂಡರಾದ ಯಮುನಪ್ಪ, ವಿಶ್ವನಾಥ, ಮದನ ಕುಮಾರ್, ವರದೇಂದ್ರ ಜ್ಯೋಷಿ, ಭೀಮರಾವ್, ದಯಾನಂದ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ರಾಯಚೂರು ಜಿಲ್ಲಾ ಉಸ್ತುವಾರಿ ಸಚಿವರ ಪ್ರವಾಸ

ರಾಯಚೂರು,ಫೆ.04

ರಾಯಚೂರು ಜಿಲ್ಲಾ ಉಸ್ತುವಾರಿ ಸಚಿವರು ಆಗಿರುವ ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರಾದ ಡಾ.ಶರಣಪ್ರಕಾಶ್ ರುದ್ರಪ್ಪ ಪಾಟೀಲ್ ಅವರು 2026ರ ಫೆ.05 ರಂದು ರಾಯಚೂರು ಜಿಲ್ಲಾ ಪ್ರವಾಸ ಕೈಗೊಂಡಿದ್ದಾರೆ.


ಅವರು ಫೆ.05ರ ಬೆಳಿಗ್ಗೆ 08 ಗಂಟೆಗೆ ರಾಯಚೂರ ನಗರಕ್ಕೆ ಆಗಮಿಸಿ ನಗರದ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಮೈದಾನದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಾನಗರ ಪಾಲಿಕೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ

3ನೇ ಪುಟಕ್ಕೆ

ರೈಲಿನಡಿಗೆ ಬಿದ್ದು ಯುವತಿ ಆತ್ಮಹತ್ಯೆ

ಸಿಂಧನೂರು,ಫೆ.04–

ನಗರದ ಹೊರವಲಯದಲ್ಲಿರುವ ರೈಲ್ವೆ ನಿಲ್ದಾಣದಲ್ಲಿ ಮಂಗಳವಾರ ಸಂಜೆ ಯುವತಿಯೊಬ್ಬಳು ಸಂಚರಿಸುತ್ತಿದ್ದ ರೈಲಿನಡಿಗೆ ಬಿದ್ದು ಆತ್ಮಹತ್ಯೆ ಮಾಡಿಕೊಂಡ ಘಟನೆ ನಡೆದಿದೆ.



ಮೃತ ಯುವತಿಯನ್ನು ಮಾನ್ವಿ ತಾಲ್ಲೂಕಿನ ನೀರಮಾನ್ವಿ ಸಮೀಪದ ಸೀಕಲ್ ತಾಂಡದ ನಿವಾಸಿ ಸುಮಂಗಲಾ (21) ಎಂದು ಗುರುತಿಸಲಾಗಿದೆ.

ಅವರು ಸಿಂಧನೂರು ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಎದುರುಗಡೆ ಇರುವ ಸಮಾಜ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರ ಬಾಲಕಿಯರ ವಸತಿ ನಿಲಯದಲ್ಲಿ ವಾಸವಿದ್ದು, ಬಿಎ ಪ್ರಥಮ ವರ್ಷದ ವಿದ್ಯಾರ್ಥಿನಿಯಾಗಿದ್ದರು ಎಂದು ತಿಳಿದು ಬಂದಿದೆ.

ಮೃತ ಯುವತಿ ಮಧ್ಯಾಹ್ನದಿಂದಲೇ ರೈಲ್ವೆ ನಿಲ್ದಾಣದಲ್ಲೇ ಇದ್ದಳು ಎನ್ನಲಾಗಿದ್ದು, ಸಂಜೆ ಸುಮಾರು 5 ಗಂಟೆಗೆ ಸಿಂಧನೂರಿನಿಂದ ಬೆಂಗಳೂರಿಗೆ ಹೊರಟ ರೈಲು ಎರಡನೇ ಪ್ಲಾಟ್‌ಫಾರ್ಮ್‌ಗೆ ಪ್ರವೇಶಿಸುವ ವೇಳೆ ರೈಲಿಗೆ ಅಡ್ಡವಾಗಿ ಜಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಎಂದು ನಿಲ್ದಾಣದ ಸ್ವಚ್ಛತಾ ಕಾರ್ಮಿಕರು ತಿಳಿಸಿದ್ದಾರೆ.

ಘಟನೆಯ ಮಾಹಿತಿ ತಿಳಿಯುತ್ತಿದ್ದಂತೆ ಡಿವೈಎಸ್‌ಪಿ ಚಂದ್ರಶೇಖರ ಜಿ. ನಾಯಕ ಹಾಗೂ ಶಹರ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ವೀರಾರೆಡ್ಡಿ ಎಚ್. ಅವರು ಸ್ಥಳಕ್ಕೆ ಭೇಟಿ ನೀಡಿ, ರೈಲ್ವೆ ಇಲಾಖೆ ಅಧಿಕಾರಿಗಳು ಹಾಗೂ ಸಿಬ್ಬಂದಿಗಳೊಂದಿಗೆ ಪರಿಶೀಲನೆ ನಡೆಸಿ ಮಾಹಿತಿ ಸಂಗ್ರಹಿಸಿದರು.

ಈ ಕುರಿತು ರಾಯಚೂರು ರೈಲ್ವೆ ಪೊಲೀಸ್ ಠಾಣೆಗೆ ಮಾಹಿತಿ ನೀಡಲಾಗಿದ್ದು, ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗುವುದು ಎಂದು ಡಿವೈಎಸ್‌ಪಿ ಚಂದ್ರಶೇಖರ ಜಿ. ನಾಯಕ ಅವರು ತಿಳಿಸಿದ್ದಾರೆ.

ಬಾಡಿಗೆ ಮನೆಯಲ್ಲಿ ನೇಣಿಗೆ ಶರಣಾದ ಯುವಕ : ಪೊಲೀಸರಿಂದ ತಪಾಸಣೆ

ಸಿಂಧನೂರು,ಫೆ.04–

ನಗರದ ಮೆಹಬೂಬಿ ಕಾಲೋನಿಯ ಬಾಡಿಗೆ ಮನೆಯಲ್ಲಿ ಯುವಕನೊಬ್ಬ ನೇಣು ಬಿಗಿದು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ನಡೆದಿದೆ. ಏಳುರಾಗಿ ಕ್ಯಾಂಪ್ ನಿವಾಸಿ ದೂದ್ ಪಾಷಾ(25) ಮೃತ ಯುವಕನಾಗಿದ್ದು, ಇತ್ತೀಚೆಗೆ ಸಿಂಧನೂರಿನಲ್ಲಿ ಬಾಡಿಗೆ ಮನೆಯಲ್ಲಿ ವಾಸವಾಗಿದ್ದನು ಎಂದು ತಿಳಿದು ಬಂದಿದೆ. ಕೌಟುಂಬಿಕ ಕಲಹ ಹಿನ್ನೆಲೆ ಆತ್ಮಹತ್ಯೆ ಮಾಡಿಕೊಂಡಿರುವ ಶಂಕೆ ವ್ಯಕ್ತವಾಗಿದ್ದು, ಈ ಕುರಿತು ಪೊಲೀಸರು ತನಿಖೆ ಮುಂದುವರಿಸಿದ್ದಾರೆ.

ಘಟನೆಯ ಮಾಹಿತಿ ತಿಳಿಯುತ್ತಿದ್ದಂತೆ ಸಿಂಧನೂರು ನಗರ ಪೊಲೀಸ್

3ನೇ ಪುಟಕ್ಕೆ

ಸಚಿವರಾದ ಭೋಸರಾಜು ಜಿಲ್ಲಾ ಪ್ರವಾಸ

ರಾಯಚೂರು ಫೆ. 04

ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಹಾಗೂ ಕರ್ನಾಟಕ ವಿಧಾನ ಪರಿಷತ್ತು ಸಭಾ ನಾಯಕರಾದ ಎನ್.ಎಸ್.ಭೋಸರಾಜು ಅವರು ಫೆ.05ರಂದು ರಾಯಚೂರು ಜಿಲ್ಲಾ ಪ್ರವಾಸ ಕೈಗೊಂಡಿದ್ದಾರೆ.

ಫೆ.5ರ ಬೆಳಿಗ್ಗೆ 10 ಗಂಟೆಗೆ ನಗರದ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಮೈದಾನದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಾನಗರ ಪಾಲಿಕೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ನಡೆಯುವ ಎಡದೊರೆ ನಾಡು ರಾಯಚೂರು ಜಿಲ್ಲಾ ಉತ್ಸವ-2026ರ ಉತ್ಸವದ ವಿವಿಧ ಕಾರ್ಯಕ್ರಮಗಳಲ್ಲಿ ಭಾಗಿಯಾಗುವರು. ಬೆಳಗ್ಗೆ 10 ಗಂಟೆಗೆ ರಾಯಚೂರ ಸಿಟಿಯಿಂದ ನಿರ್ಗಮಿಸಿ ಸಿರವಾರ ತಾಲೂಕಿಗೆ ತೆರಳಿ ಅಲ್ಲಿನ ಸ್ಥಳೀಯ ಕಾರ್ಯಕ್ರಮಗಳಲ್ಲಿ ಭಾಗಿಯಾಗುವರು. ಮಧ್ಯಾಹ್ನ 12 ಗಂಟೆಗೆ ನವಲಕಲ್‌ದಿಂದ ನಿರ್ಗಮಿಸಿ ಹೀರಾ ಗ್ರಾಮಕ್ಕೆ ತೆರಳಿ ಅಲ್ಲಿನ ಕಾರ್ಯಕ್ರಮದಲ್ಲಿ ಭಾಗಿಯಾಗುವರು. ಮಧ್ಯಾಹ್ನ 1.30ಕ್ಕೆ ಹೀರಾದಿಂದ ನಿರ್ಗಮಿಸಿ ರಾಯಚೂರು ನಗರಕ್ಕೆ ಆಗಮಿಸಿ ಉತ್ಸವದ ಕಾರ್ಯಕ್ರಮದಲ್ಲಿ ಭಾಗಿಯಾಗುವರು.

ಸಂಜೆ 6 ಗಂಟೆಗೆ ಎಡೆದೊರೆ ನಾಡು ರಾಯಚೂರು ಜಿಲ್ಲಾ ಉತ್ಸವ-2026ರ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸುವರು. ಬಳಿಕ ರಾಯಚೂರನಲ್ಲಿ ವಾಸ್ತವ್ಯ ಮಾಡುವರು.

ಫೆ.06ರ ಬೆಳಿಗ್ಗೆ 9.30ಕ್ಕೆ ನಗರದ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಆವರಣದಲ್ಲಿ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ, ಜಿಲ್ಲಾಡಳಿತದಿಂದ ಆಯೋಜಿಸಿರುವ ಡಿಡಿಯು-ಜಿಕೆವೈ ಯೋಜನೆಯಡಿ ಉದ್ಯೋಗ ಮೇಳ-2026ರಲ್ಲಿ ಭಾಗವಹಿಸಲಿದ್ದಾರೆ.

ಬೆಳಿಗ್ಗೆ 10 ರಿಂದ ಎಡೆದೊರೆ ನಾಡು ರಾಯಚೂರು ಜಿಲ್ಲಾ ಉತ್ಸವ-2026ರ ಪ್ರಯುಕ್ತ ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸಲಿದ್ದಾರೆ. ಸಂಜೆ 4.30ಕ್ಕೆ ರಾಯಚೂರಿನಿಂದ ನಿರ್ಗಮಿಸಿ ನೀರಮಾನ್ವಿ ಗ್ರಾಮಕ್ಕೆ ತೆರಳಿ ಶ್ರೀ ಯಲ್ಲಮ್ಮದೇವಿ ಜಾತ್ರೋತ್ಸವದಲ್ಲಿ ಭಾಗಿಯಾಗುವರು. ಸಂಜೆ 6.30ಕ್ಕೆ ನೀರಮಾನ್ವಿಯಿಂದ ನಿರ್ಗಮಿಸಿ ರಾಯಚೂರು ಸಿಟಿಗೆ ಆಗಮಿಸಿ ವಾಸ್ತವ್ಯ ಮಾಡುವರು.

ಫೆ.07ರ ಬೆಳಿಗ್ಗೆ 10 ಗಂಟೆಗೆ ನಗರದ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಆವರಣದಲ್ಲಿ

3ನೇ ಪುಟಕ್ಕೆ

ನಾಯಿ ಕಡಿತ ಪ್ರಕರಣ ತಡೆಗೆ ಸಮುದಾಯ ಮಟ್ಟದಲ್ಲಿ ಜಾಗೃತಿ ಅಗತ್ಯ : ಡಾ.ಯಲ್ಲಾ ರಮೇಶ್ ಬಾಬು



ಬಳ್ಳಾರಿ,ಫೆ.04-

ಸಮುದಾಯಗಳಲ್ಲಿ ಹೆಚ್ಚುತ್ತಿರುವ ನಾಯಿ ಕಡಿತ ಪ್ರಕರಣಗಳನ್ನು ಕಡಿಮೆಗೊಳಿಸುವ ನಿಟ್ಟಿನಲ್ಲಿ ವ್ಯಾಪಕ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಯಲ್ಲಾ ರಮೇಶ್ ಬಾಬು ಹೇಳಿದರು.

ನಗರದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಚೇರಿಯ ವಿಸಿ ಸಭಾಂಗಣದಲ್ಲಿ ನಾಯಿ ಕಡಿತ ಪ್ರಕರಣಗಳ ತಡೆಗೆ ಸಂಬಂಧಿಸಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳೊಂದಿಗೆ ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ನಾಯಿ, ಬೆಕ್ಕು ಸೇರಿದಂತೆ ಯಾವುದೇ ಪ್ರಾಣಿ ಕಚ್ಚಿದಲ್ಲಿ ರೇಬೀಸ್ ಕಾಯಿಲೆ ಬರುವ ಸಾಧ್ಯತೆ ಹೆಚ್ಚಿದ್ದು, ಮುಖ್ಯವಾಗಿ ನಾಯಿಗಳ ಕಡಿತದಿಂದಲೇ ಹೆಚ್ಚಿನ ಪ್ರಮಾಣದಲ್ಲಿ ರೋಗ ಹರಡುತ್ತದೆ. ಆದ್ದರಿಂದ ಕಚ್ಚಿದ ಅಥವಾ ಪರಚಿದ ಸ್ಥಳವನ್ನು ತಕ್ಷಣ ಸೋಪು ಮತ್ತು ನೀರಿನಿಂದ ತೊಳೆದು ಹತ್ತಿರದ ಸರ್ಕಾರಿ ಆಸ್ಪತ್ರೆಗೆ ತೆರಳಿ ರೇಬೀಸ್ ಲಸಿಕೆ ಪಡೆಯಬೇಕು ಎಂದು ಸೂಚಿಸಿದರು.

ಸಾರ್ವಜನಿಕರು ಸಾಕಿದ ಅಥವಾ ಅಪರಿಚಿತ ಪ್ರಾಣಿ ಕಚ್ಚಿದರೂ ನಿರ್ಲಕ್ಷ್ಯ ವಹಿಸದೆ ವೈದ್ಯರಿಂದ ಅಗತ್ಯ ಚುಚ್ಚುಮದ್ದು ಪಡೆಯಬೇಕು. ಇದರಿಂದ ರೇಬೀಸ್ ಎಂಬ ಶೇ.100 ರಷ್ಟು ತಡೆಗಟ್ಟಬಹುದಾದ ಖಾಯಿಲೆಯನ್ನು ನಿಯಂತ್ರಿಸಬಹುದು ಎಂದರು.

ಆಶಾ ಕಾರ್ಯಕರ್ತೆಯರು ಮನೆ ಭೇಟಿ ಹಾಗೂ ಸಮೀಕ್ಷೆ ಸಂದರ್ಭಗಳಲ್ಲಿ ನಾಯಿ ಕಡಿತ ಪ್ರಕರಣಗಳ ಕುರಿತು ಮಾಹಿತಿ ಸಂಗ್ರಹಿಸುವುದರ ಜೊತೆಗೆ ಮುನ್ನೆಚ್ಚರಿಕಾ ಕ್ರಮಗಳ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಬೇಕು ಎಂದು ನಿರ್ದೇಶನ ನೀಡಿದರು.

ಜಿಲ್ಲೆಯ ಎಲ್ಲಾ ಆರೋಗ್ಯ ಕೇಂದ್ರಗಳಲ್ಲಿ ನಾಯಿ ಕಡಿತ ಕುರಿತು ಮಾಹಿತಿ ಬಿಂಬಿಸುವ ಫ್ಲೆಕ್ಸ್‌ಗಳನ್ನು ಪ್ರದರ್ಶಿಸಬೇಕು. ಜೊತೆಗೆ ಗ್ರಾಮ ಪಂಚಾಯಿತಿ ಹಾಗೂ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯ ಕಸ ಸಂಗ್ರಹ ವಾಹನಗಳಲ್ಲಿ ನಾಯಿ ಕಡಿತ ಜಾಗೃತಿ ಆಡಿಯೋ ಜಿಂಗಲ್‌ಗಳನ್ನು ಪ್ರತಿದಿನ ಪ್ರಸಾರ ಮಾಡಬೇಕು ಎಂದು ತಿಳಿಸಿದರು. ಮನೆಯ ಸುತ್ತಮುತ್ತ ಆಹಾರ ತ್ಯಾಜ್ಯಗಳನ್ನು ಚೆಲ್ಲಬಾರದು. ಇದರಿಂದ ಬೀದಿ ನಾಯಿಗಳ ಸಂಖ್ಯೆ ಹೆಚ್ಚಾಗುತ್ತದೆ. ಮಕ್ಕಳ ಮೇಲೆ ವಿಶೇಷ ಗಮನ ವಹಿಸಬೇಕು. ನಾಯಿ ಕಚ್ಚಿದ ಸಂದರ್ಭಗಳಲ್ಲಿ ಮನೆಮದ್ದು ಅಥವಾ ನಾಟಿ ವೈದ್ಯರ ಬಳಿ ಹೋಗದೇ ನೇರವಾಗಿ ಆರೋಗ್ಯ ಕೇಂದ್ರಕ್ಕೆ ತೆರಳಿ ಲಸಿಕೆ ಪಡೆಯಬೇಕು ಎಂದು ಸಲಹೆ ನೀಡಿದರು. ನಾಯಿ ಕಚ್ಚಿದ ನಂತರ ಗಾಯವನ್ನು ಹರಿಯುವ ಸ್ವಚ್ಛ ನೀರಿನಲ್ಲಿ ಕನಿಷ್ಠ 15 ನಿಮಿಷ ತೊಳೆಯುವುದರಿಂದ ಶೇ.5070 ರಷ್ಟು ರೇಬೀಸ್ ಅಪಾಯ ಕಡಿಮೆಯಾಗುತ್ತದೆ. ವೈದ್ಯರ ಸಲಹೆ ಮೇರೆಗೆ 1, 3, 7, 14 ಮತ್ತು 28ನೇ ದಿನಗಳಲ್ಲಿ ಐದು ಡೋಸ್ ಲಸಿಕೆಗಳನ್ನು ಸಂಪೂರ್ಣವಾಗಿ ಪಡೆಯಬೇಕು ಎಂದು ತಿಳಿಸಿದರು. ಜಿಲ್ಲೆಯ ಎಲ್ಲಾ ಆರೋಗ್ಯ ಕೇಂದ್ರಗಳಲ್ಲಿ ???ಂಟಿ ರೇಬೀಸ್ ಲಸಿಕೆ ಲಭ್ಯವಿದ್ದು, ರೋಗಿಗೆ ಮೊದಲು ಚಿಕಿತ್ಸೆ ನೀಡಿ ಬಳಿಕ ದಾಖಲೆ ಪ್ರಕ್ರಿಯೆ ನಡೆಸಬೇಕು ಎಂದು ಆರೋಗ್ಯ ಸಿಬ್ಬಂದಿಗೆ ಸೂಚಿಸಿದರು.

ಸಭೆಯಲ್ಲಿ ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ. ಮರಿಯಂಬಿ ವಿ.ಕೆ., ಪಶುಪಾಲನ ಮತ್ತು ಪಶುವೈದ್ಯಕೀಯ ಇಲಾಖೆಯ ಉಪನಿರ್ದೇಶಕ ಡಾ. ಸದಾಶಿವ ಉಪ್ಪಾರ, ಸೇರಿದಂತೆ ವಿವಿಧ ವೈದ್ಯಾಧಿಕಾರಿಗಳು ಹಾಗೂ ಸಿಬ್ಬಂದಿ ಹಾಜರಿದ್ದರು.



ಜಿಲ್ಲಾ ಮಟ್ಟದ ವಸ್ತು ಪ್ರದರ್ಶನ, ಮಾರಾಟ ಮೇಳಕ್ಕೆ ಚಾಲನೆ

ಬಳ್ಳಾರಿ,ಫೆ,03-

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಹಾಗೂ ಸಂಜೀವಿನಿ ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಅಭಿಯಾನ ಇವರ ಸಂಯುಕ್ತಾಶ್ರಯದಲ್ಲಿ, ನಗರದ ಶ್ರೀ ಕೋಟೆ ಮಲ್ಲೇಶ್ವರ ದೇವಸ್ಥಾನದ ಜಾತ್ರಾ ಮಹೋತ್ಸವದ ಅಂಗವಾಗಿ ಆಯೋಜಿಸಲಾಗಿರುವ ಮೂರು ದಿನಗಳ (ಫೆ.1ರಿಂದ 3ರವರೆಗೆ) ಜಿಲ್ಲಾ ಮಟ್ಟದ ವಸ್ತು ಪ್ರದರ್ಶನ ಮತ್ತು ಮಾರಾಟ ಮೇಳಕ್ಕೆ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮುಹಮ್ಮದ್ ಹಾರೀಸ್ ಸುಮೇರ್ ಅವರು ಭಾನುವಾರ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ಗ್ರಾಮೀಣ ಭಾಗದ ಮಹಿಳಾ ಸ್ವ-ಸಹಾಯ ಸಂಘಗಳ ಸದಸ್ಯರು ತಯಾರಿಸಿದ ಉತ್ಪನ್ನಗಳಿಗೆ ಮಾರುಕಟ್ಟೆ ಒದಗಿಸುವ ಉದ್ದೇಶದಿಂದ ಮೇಳ ಆಯೋಜಿಸಲಾಗಿದೆ. ಮಹಿಳೆಯರ ಆರ್ಥಿಕ ಸಬಲೀಕರಣಕ್ಕೆ ಇಂತಹ ಕಾರ್ಯಕ್ರಮಗಳು ಸಹಕಾರಿಯಾಗಲಿದ್ದು, ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭೇಟಿ ನೀಡಿ ಮೇಳದ ಸದುಪಯೋಗ ಪಡೆದುಕೊಳ್ಳಬೇಕು ಎಂದು ಕರೆ ನೀಡಿದರು. ಮೇಳದಲ್ಲಿ ಮಹಿಳಾ ಸ್ವ-ಸಹಾಯ ಸಂಘಗಳ ಸದಸ್ಯರು ತಯಾರಿಸಿದ ವಿವಿಧ ಬಗೆಯ ಕೈಗಾರಿಕಾ ಹಾಗೂ ಗೃಹೋಪಯೋಗಿ ಉತ್ಪನ್ನಗಳನ್ನು ಪ್ರದರ್ಶನ ಮತ್ತು ಮಾರಾಟಕ್ಕೆ ಇಡಲಾಗಿತ್ತು.

ಈ ಸಂದರ್ಭದಲ್ಲಿ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಕೆ.ಪಿ. ರವಿಕುಮಾರ್, ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ ಶಶಿಕಾಂತ್ ಶಿವಪುರೆ, ಜಿಪಂ ಮುಖ್ಯ ಯೋಜನಾಧಿಕಾರಿ ವಾಗೀಶ್ ಶಿವಾಚಾರ್ಯ, ಜಿಪಂ ಯೋಜನಾ ನಿರ್ದೇಶಕ ಬಸವರಾಜ ಹಿರೇಮಠ, ಜಿಪಂ ಮುಖ್ಯ ಲೆಕ್ಕಾಧಿಕಾರಿ ವಿನೋದ್ ಕುಮಾರ್ ಸೇರಿದಂತೆ ಎನ್‌ಆರ್‌ಎಲ್‌ಎಂ ಯೋಜನೆಯ ಸಿಬ್ಬಂದಿಗಳು ಮತ್ತು ಮಹಿಳಾ ಸ್ವ-ಸಹಾಯ ಸಂಘಗಳ ಸದಸ್ಯರುಗಳು ಉಪಸ್ಥಿತರಿದ್ದರು.

ಬಿಸಿಯೂಟ ಸೇವಿಸಿ 69 ವಿದ್ಯಾರ್ಥಿಗಳು ಅಸ್ವಸ್ಥ : ಆಸ್ಪತ್ರೆಗೆ ದಾಖಲು

ಔರಾದ್,ಫೆ.03-

ತಾಲೂಕಿನ ಜಮಲಾಪುರ್ ಗ್ರಾಮದ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಬಿಸಿಯೂಟ ಸೇವಿಸಿದ ನಂತರ 69 ವಿದ್ಯಾರ್ಥಿಗಳು ಅಸ್ವಸ್ಥಗೊಂಡ ಘಟನೆ ಮಂಗಳವಾರ ನಡೆದಿದೆ. ಅಸ್ವಸ್ಥರಾದ ವಿದ್ಯಾರ್ಥಿಗಳನ್ನು ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ ಎಂದು ತಿಳಿದು ಬಂದಿದೆ. ಜಮಲಾಪುರ್ ಗ್ರಾಮದ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಒಟ್ಟು 94 ವಿದ್ಯಾರ್ಥಿಗಳ ದಾಖಲೆ ಇದ್ದು, ಮಂಗಳವಾರ 69 ವಿದ್ಯಾರ್ಥಿಗಳು ಹಾಜರಿದ್ದರು. ಬಿಸಿಯೂಟ ಸೇವಿಸಿದ ಬಳಿಕ 23 ವಿದ್ಯಾರ್ಥಿಗಳಿಗೆ ತಲೆನೋವು, ಹೊಟ್ಟೆನೋವು ಹಾಗೂ ವಾಂತಿ ಕಾಣಿಸಿಕೊಂಡ ಹಿನ್ನೆಲೆಯಲ್ಲಿ ಅವರನ್ನು ತಕ್ಷಣ ಔರಾದ್ ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಯಿತು.



ನಂತರ ಇತರ ವಿದ್ಯಾರ್ಥಿಗಳಲ್ಲಿಯೂ ಆರೋಗ್ಯದಲ್ಲಿ ಏರುಪೇರು ಕಾಣಿಸಿಕೊಂಡ ಹಿನ್ನೆಲೆಯಲ್ಲಿ ಎಲ್ಲ ವಿದ್ಯಾರ್ಥಿಗಳಿಗೆ ಆರೋಗ್ಯ ತಪಾಸಣೆ ನಡೆಸಲಾಗುತ್ತಿದೆ ಎಂದು ಮೂಲಗಳು ತಿಳಿಸಿವೆ. ಅಸ್ವಸ್ಥಗೊಂಡ ವಿದ್ಯಾರ್ಥಿಗಳ ಪೈಕಿ ಒಬ್ಬರನ್ನು ಹೆಚ್ಚಿನ ಚಿಕಿತ್ಸೆಗಾಗಿ ಜಿಲ್ಲಾ ಆಸ್ಪತ್ರೆಗೆ ರವಾನಿಸಲಾಗಿದೆ. ಉಳಿದ ವಿದ್ಯಾರ್ಥಿಗಳಿಗೆ ಔರಾದ್ ತಾಲ್ಲೂಕು ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ ಎಂದು ತಿಳಿದು ಬಂದಿದೆ.

ಈ ಘಟನೆಗೆ ಸಂಬಂಧಿಸಿ, ಬಿಸಿ ಊಟ ಸೇವಿಸಿ ಮಕ್ಕಳು ಅಸ್ವಸ್ಥಗೊಂಡಿದ್ದಾರೆ ಎಂಬ ಮಾಧ್ಯಮ ವರದಿಯನ್ನು ಆಧರಿಸಿ, ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗವು ಸ್ವಯಂ ಪ್ರೇರಿತ ದೂರು ದಾಖಲಿಸಿಕೊಂಡಿದೆ.

ಈ ಕುರಿತು ಮಧ್ಯಾಹ್ನದ ಉಪಹಾರ ಯೋಜನೆಯ ಆಯುಕ್ತರಿಗೆ ಪತ್ರ ಬರೆದಿರುವ ಆಯೋಗದ ಅಧ್ಯಕ್ಷ ಶಶಿಧರ್ ಎಸ್. ಕೋಸಂಬೆ, ಔರಾದ್ ತಾಲ್ಲೂಕಿನ ಜಮಲಾಪುರ್ ಸರ್ಕಾರಿ ಶಾಲೆಯಲ್ಲಿ ಸುಮಾರು 80 ಮಕ್ಕಳಿಗೆ ಹೊಟ್ಟೆನೋವು ಕಾಣಿಸಿಕೊಂಡು ಚಿಕಿತ್ಸೆ ನೀಡಲಾಗುತ್ತಿದೆ ಎಂಬ ಅಂಶ ಮಾಧ್ಯಮಗಳಲ್ಲಿ ಪ್ರಕಟವಾಗಿದೆ ಎಂದು ಉಲ್ಲೇಖಿಸಿದ್ದಾರೆ.

ಪತ್ರ ತಲುಪಿದ ತಕ್ಷಣವೇ ಸಂಬಂಧಪಟ್ಟ ಜಿಲ್ಲೆಗಳ ಅಧಿಕಾರಿಗಳೊಂದಿಗೆ ಸಭೆ ನಡೆಸಿ, ಬಿಸಿ ಊಟದಿಂದ ಮಕ್ಕಳಿಗೆ ಉಂಟಾಗುವ ತೊಂದರೆಗಳನ್ನು ತಡೆಯಲು ಸೂಕ್ತ ಕ್ರಮ ಕೈಗೊಳ್ಳುವಂತೆ ಆಯುಕ್ತರಿಗೆ ಅವರು ಸೂಚಿಸಿದ್ದಾರೆ. ಜೊತೆಗೆ ಇಲಾಖೆ ಕೈಗೊಂಡ ಕ್ರಮಗಳ ಕುರಿತು ಐದು ದಿನಗಳೊಳಗೆ ಆಯೋಗಕ್ಕೆ ವರದಿ ಸಲ್ಲಿಸುವಂತೆ ಕೋರಿದ್ದಾರೆ.

ಮಕ್ಕಳ ಭವಿಷ್ಯ ರೂಪಿಸುವಲ್ಲಿ ಪೋಷಕರ ಪಾತ್ರ ಮುಖ್ಯ : ಕರುಣೇಶ್ವರ ಶಿವಾಚಾರ್ಯ

ಕಲಬುರಗಿ,ಫೆ.03-

ತಾಲೂಕಿನ ನೀಡಗುಂದಾ ಗ್ರಾಮದ ಶ್ರೀ ಕಂಚಾಳಕುಂಟಿ ನಂದಿ ಬಸವೇಶ್ವರ ವಿದ್ಯಾಸಂಸ್ಥೆಯಲ್ಲಿ 17ನೇ ಶಾಲಾ ವಾರ್ಷಿಕೋತ್ಸವ ಹಾಗೂ ತಾಯಂದಿರ ಕೈ ತುತ್ತಿನ ಊಟ ಕಾರ್ಯಕ್ರಮವನ್ನು ಜ್ಯೋತಿ ಬೆಳಗಿಸುವ ಮೂಲಕ ಭಾನುವಾರ ಉದ್ಘಾಟಿಸಲಾಯಿತು.



ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಿದ್ದ ಶ್ರೀ ಷ.ಬ್ರ. ಕರುಣೇಶ್ವರ ಶಿವಾಚಾರ್ಯರು ಆಶೀರ್ವಚನ ನೀಡಿ, ಮಕ್ಕಳ ಭವಿಷ್ಯವನ್ನು ಉಜ್ವಲಗೊಳಿಸುವಲ್ಲಿ ತಂದೆ-ತಾಯಿಯರ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ತಾಯಿ ಗರ್ಭಧಾರಣೆಯ ಹಂತದಿಂದಲೇ ಮಗುವಿನ ಆರೋಗ್ಯದ ಬಗ್ಗೆ ಎಚ್ಚರ ವಹಿಸಬೇಕು. ಮಕ್ಕಳು ಪ್ರೌಢಾವಸ್ಥೆಗೆ ತಲುಪುವವರೆಗೂ ಪೋಷಕರು ಅವರೊಂದಿಗೆ ಆಪ್ತರಾಗಿರಬೇಕು ಎಂದು ಕಿವಿಮಾತು ಹೇಳಿದರು.

ಮಕ್ಕಳಿಗೆ ಸಾತ್ವಿಕ ನಡವಳಿಕೆ, ಪೌಷ್ಟಿಕ ಆಹಾರ ಹಾಗೂ ಉತ್ತಮ ಸಂಸ್ಕಾರಗಳನ್ನು ನೀಡುವ ಮೂಲಕ ಸರಿಯಾದ ಜೀವನ ಮಾರ್ಗವನ್ನು ತೋರಿಸಿಕೊಡಬೇಕು. ಬಾಲ್ಯದಲ್ಲಿ ಮಕ್ಕಳು ತಪ್ಪು ದಾರಿಗೆ ಹೋಗದಂತೆ ತಡೆಯುವುದು ಪೋಷಕರ ಜವಾಬ್ದಾರಿ. ಪ್ರೌಢಾವಸ್ಥೆಯಲ್ಲಿ ಪೋಷಕರು ಮಕ್ಕಳೊಂದಿಗೆ ಸ್ನೇಹಿತರಂತೆ ವರ್ತಿಸಬೇಕು ಎಂದು ಅವರು ಸಲಹೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಕಂಚಾಳಕುಂಟಿ ಬಸವೇಶ್ವರ ವಿದ್ಯಾಸಂಸ್ಥೆಯ ಉಪಾಧ್ಯಕ್ಷರು ಹಾಗೂ ಕರ್ನಾಟಕ ರಾಜ್ಯ ಕುಂಬಾರ ಸರ್ಕಾರಿ ನೌಕರರ ಪ್ರೇಮಾಭಿವೃದ್ಧಿ ಸಂಘದ ಅಧ್ಯಕ್ಷರಾದ ಬಾಬು ಎಸ್. ಕುಂಬಾರ ಅವರು ವಹಿಸಿದ್ದರು.

ಈ ಸಂದರ್ಭದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ ಅಶೋಕ ಎಲ್. ಹೂವಿನಭಾವಿ, ಪಂಚಾಯತ್ ಅಭಿವೃದ್ಧಿ ಅಧಿಕಾರಿ ರೇಣುಕಾ ಹಾಷನಪಲ್ಲ, ಜಿಲ್ಲಾ ಪಂಚಾಯತ್ ಮಾಜಿ ಸದಸ್ಯ ಶರಣು ಅಮಿತ್, ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಮುಕುಂದ ದೇಶಪಾಂಡೆ ಸೇರಿದಂತೆ ಜಗನಾಥ್ ಎಸ್.ಕುಂಬಾರ, ರವಿ ಕೊಂಡಪಳ್ಳಿ, ಪ್ರಕಾಶ, ಸಿದ್ದೆಗೌಡ, ಶಾಲೆಯ ಮುಖ್ಯ ಶಿಕ್ಷಕರಾದ ವೀರಶೆಟ್ಟಿ ಮೊಳಕೇರಿ, ಕರೆಪ್ಪ ಪೂಜಾರಿ, ಸದಾನಂದ ಗುತ್ತೇದಾರ, ಮರೆಪ್ಪ ಗೌತಮ ಹಾಗೂ ಶಾಲಾ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

ಫೆ.8ರಂದು 'ವಿಶ್ವಾಮಿತ್ರ' ಪ್ರತಿಭಾ ಪುರಸ್ಕಾರ ಕಾರ್ಯಕ್ರಮ : ಅಸಗೋಡು ಜಯಸಿಂಹ

ಕಲಬುರಗಿ,ಫೆ.03-

ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿ ವತಿಯಿಂದ ಫೆ.8 ರಂದು ಬೆಳಗ್ಗೆ 11 ಗಂಟೆಗೆ ನಗರದ ಊದನೂರ ರಸ್ತೆಯ ಜಯತೀರ್ಥ

ಕಲ್ಯಾಣ ಮಂಟಪದಲ್ಲಿ 2024-25ನೇ ಸಾಲಿನ ಎಸೆಸೆಲ್ಸಿ ಪರೀಕ್ಷೆಯಲ್ಲಿ ಜಿಲ್ಲಾವಾರು ಮೊದಲ ಮೂರು ಸ್ಥಾನ ಪಡೆದು ತೇರ್ಗಡೆಯಾದ ಕಲಬುರಗಿ ಮತ್ತು ಬೆಳಗಾವಿ ವಿಭಾಗದ 61 ಪ್ರತಿಭಾವಂತ ಬ್ರಾಹ್ಮಣ ವಿದ್ಯಾರ್ಥಿಗಳಿಗೆ ವಿಶ್ವಾಮಿತ್ರ ಪ್ರತಿಭಾ ಪುರಸ್ಕಾರ ನೀಡುವ ಕಾರ್ಯಕ್ರಮವು ಹಮ್ಮಿಕೊಳ್ಳಲಾಗಿದೆ ಎಂದು ಮಂಡಳಿ ಅಧ್ಯಕ್ಷ ಅಸಗೋಡು ಜಯಸಿಂಹ ಹೇಳಿದರು.



ನಗರದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರಥಮ, ದ್ವಿತೀಯ ಮತ್ತು ತೃತೀಯ ಸ್ಥಾನ ಪಡೆದ ಬ್ರಾಹ್ಮಣ ವಿದ್ಯಾರ್ಥಿಗಳಿಗೆ ಕ್ರಮವಾಗಿ 15 ಸಾವಿರ, 10 ಸಾವಿರ ಮತ್ತು 5 ಸಾವಿರ ನಗದು ಬಹುಮಾನ, ಪ್ರಶಸ್ತಿ ಪತ್ರ ಹಾಗೂ ಪಾರಿತೋಷಕಗಳನ್ನು ನೀಡಲಾಗುವುದು ಎಂದರು.

ಹಾವೇರಿ, ಗದಗ, ಧಾರವಾಡ, ಚಿಕ್ಕೋಡಿ, ಬೆಳಗಾವಿ, ಬಾಗಲಕೋಟೆ, ವಿಜಯಪುರ, ಶಿರಸಿ, ಉತ್ತರ ಕನ್ನಡ, ಯಾದಗಿರಿ, ಕಲಬುರಗಿ, ಕೊಪ್ಪಳ, ರಾಯಚೂರು, ಬೀದರ್, ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳಿಗೆ ಬರುವ ವಿದ್ಯಾರ್ಥಿಗಳಿಗೆ ಪ್ರಯಾಣ ಭತ್ಯೆ ನೀಡಲಾಗುತ್ತಿದೆ ಎಂದರು.

ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಅವರ ಅಧ್ಯಕ್ಷತೆಯಲ್ಲಿ ರಾಜ್ಯದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಕಂದಾಯ ಸಚಿವ ಕೃಷ್ಣಭೈರೇಗೌಡ, ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ್ ಪಾಟೀಲ್, ಸಂಸದ ರಾಧಾಕೃಷ್ಣ ದೊಡ್ಡಮನಿ, ಶಾಸಕರು, ಇತರ ಜನಪ್ರತಿನಿಧಿಗಳು, ವಿಪ್ರ ಮುಖಂಡರು, ಬ್ರಾಹ್ಮಣ ಅಭಿವೃದ್ಧಿ ಮಂಡಳಿ ನಿರ್ದೇಶಕರು ಭಾಗವಹಿಸಲಿದ್ದಾರೆ ಎಂದರು.

ರಾಜ್ಯದಲ್ಲಿ ಬ್ರಾಹ್ಮಣ ಸಮುದಾಯ ಶಿಕ್ಷಣ, ವಿಜ್ಞಾನ, ತಂತ್ರಜ್ಞಾನ, ಸಾಹಿತ್ಯ, ಕ್ರೀಡೆ ಮತ್ತು ಉದ್ಯಮ ಹೀಗೆ ಎಲ್ಲಾ ಕ್ಷೇತ್ರಗಳಲ್ಲೂ ಅತ್ಯುತ್ತಮ ಸಾಧನೆ ಮಾಡುತ್ತಿದ್ದಾರೆ. ಆದರೆ, ಈ ಸಮುದಾಯ ಆರ್ಥಿಕವಾಗಿ ಸದೃಢವಾಗಿಲ್ಲ.

ನಮ್ಮ ನಿಗಮದಿಂದ ಸಮಾಜದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಿಸಲು ನಗದು ಬಹುಮಾನ ಮತ್ತು ಸ್ವಯಂ ಉದ್ಯೋಗ ಕೈಗೊಳ್ಳಲು ನೇರ ಸಾಲ ಯೋಜನೆಯಡಿಯಲ್ಲಿ ಸಹಾಯಧನ ನೀಡಲಾಗುತ್ತಿದೆ ಎಂದು ವಿವರಿಸಿದರು.

ಸುದ್ದಿಗೋಷ್ಠಿಯಲ್ಲಿ ಸಮಾಜದ ಮುಖಂಡರಾದ ಕೃಷ್ಣಾಜಿ ಕುಲಕರ್ಣಿ, ಶ್ರೀಪಾದ ಜೋಶಿ, ಪ್ರಮೋದ ದೇಶಪಾಂಡೆ, ಗುರುರಾಜ ಕುಲಕರ್ಣಿ, ವೆಂಕೋಬಾ ಕುಲಕರ್ಣಿ, ವೆಂಕಟೇಶ ಕುಲಕರ್ಣಿ, ಪ್ರಶಾಂತ ಕೊರವಿ, ನಾಗುಬಾಯಿ ದೊಡ್ಡಮನಿ ಇತರರಿದ್ದರು.



ಎಸ್‌ಐಆರ್‌ನಿಂದ ರಕ್ತರಹಿತ ನರಮೇಧ : ಪರಕಾಲ ಪ್ರಭಾಕರ್

ಬೀದರ್ ,ಫೆ.04-

ಇಂದಿನ ಭಾರತದಲ್ಲಿ ನಾಗರಿಕರನ್ನು ದೇಶದಿಂದ ಹೊರಹಾಕಲು ಸಾಧ್ಯವಿಲ್ಲ. ಹಾಗೆಯೇ ಹೊಡೆದು ಹಾಕಲು ಕೂಡ ಕಷ್ಟವಿದೆ. ಹಾಗಾಗಿ ಸರಕಾರ ಎಸ್‌ಐಆರ್ ಮೂಲಕ ರಕ್ತರಹಿತ ನರಮೇಧಕ್ಕಿಳಿದಿದೆ ಎಂದು ಆರ್ಥಿಕ ತಜ್ಞ ಪರಕಾಲ ಪ್ರಭಾಕರ್ ಆತಂಕ ವ್ಯಕ್ತಪಡಿಸಿದ್ದಾರೆ.

ಎಸ್‌ಐಆರ್ ಬಗ್ಗೆ ನಗರದ ಡಾ. ಚನ್ನಬಸವ ಪಟ್ಟದೇವರು ರಂಗ ಮಂದಿರದಲ್ಲಿ ಮಂಗಳವಾರ ಚಿಂತನ-ಮಂಥನ ಸಮಾವೇಶದಲ್ಲಿ ಅವರು ಮಾತನಾಡಿದರು.

ನಾವು ಎಷ್ಟು ದಿನ ಇಂತಹ ಚರ್ಚೆ, ಕಾರ್ಯಕ್ರಮ ಮಾಡುತ್ತೇವೆಯೋ ಗೊತ್ತಿಲ್ಲ. ಇನ್ನು ಎಷ್ಟು ವರ್ಷಗಳಲ್ಲಿ ಕೆಂಪು ಕೋಟೆ ಮೇಲೆ ರಾಷ್ಟ್ರ ಧ್ವಜ ಹಾರಿಸುತ್ತೇವೋ ಗೊತ್ತಿಲ್ಲ. ಬಹುಶಃ ಈ ವರ್ಷ ಹಾರಿಸಬಹುದು. ಆದರೆ ಮುಂದಿನ ವರ್ಷ ಹಾರಿಸಲಾಗುತ್ತದೆ ಎಂದು ನನಗೆ ಹೇಳಲಾಗುವುದಿಲ್ಲ. ಧ್ವಜ ಹಾರಿಸಲಾಗುವುದು, ಆದರೆ ಅದು ತಿರಂಗಾ ಆಗಿರುತ್ತದೋ ಇಲ್ಲವೋ ಎನ್ನುವುದು ನನಗೆ ಗೊತ್ತಿಲ್ಲ ಎಂದು ಅವರು ಕಳವಳ ವ್ಯಕ್ತಪಡಿಸಿದರು.

ಭಾರತದಲ್ಲಿ ಎಸ್‌ಐಆರ್‌ನ ಎರಡನೇ ಹಂತದಲ್ಲಿ 6.5 ಕೋಟಿ ಜನರು ಮತದಾರರ ಪಟ್ಟಿಯಿಂದ ಹೊರಗುಳಿಯಲಿದ್ದಾರೆ. ಆದರೆ ಇದು ಸಣ್ಣ ಸಂಖ್ಯೆಯಲ್ಲ, ಜಗತ್ತಿನ ಶೇ. 85ರಷ್ಟು ದೇಶಗಳಲ್ಲಿ ಇಷ್ಟೊಂದು ಸಂಖ್ಯೆಯ ಜನ ಬದುಕುತ್ತಿದ್ದಾರೆ. ಈ ಎಸ್‌ಐಆರ್ ಮುಗಿಯುವ ವೇಳೆಗೆ 16.5 ಕೋಟಿ ಜನರ ಮತದಾನದ ಹಕ್ಕನ್ನು ರದ್ದುಗೊಳಿಸಲಾಗುತ್ತದೆ. ದೇಶದಲ್ಲಿ ನಾಗರಿಕತೆಯ ಹತ್ಯೆಯಾಗುತ್ತಿದ್ದು, ಆದರೆ ರಕ್ತ ಹರಿಯುತ್ತಿಲ್ಲ ಎಂದು ಪ್ರಭಾಕರ್ ತಿಳಿಸಿದರು.

ಭಾರತ ದೇಶ ಇಸ್ರೇಲೀಕರಣ ಆಗುತ್ತಿರುವುದು ಖಚಿತವಾಗುತ್ತಿದೆ. ಇದರ ವಿರುದ್ಧ ಯಾವುದೇ ಪಕ್ಷಗಳು ಧ್ವನಿ ಎತ್ತುವುದಿಲ್ಲ. ಇದರ ವಿರುದ್ಧ ಜನರು ಬೀದಿಗಿಳಿಯಬೇಕಾಗಿದೆ. ಆವಾಗ ಮಾತ್ರ ಇದನ್ನು ತಡೆಯಲು ಸಾಧ್ಯ ಎಂದು ಅವರು ನುಡಿದರು.

ಖ್ಯಾತ ಅಂಕಣಕಾರ, ಚಿಂತಕ ಶಿವಸುಂದರ್ ಮಾತನಾಡಿ, ಕೆಲ ವರ್ಷಗಳಿಂದ ಸಂವಿಧಾನದ ಮೇಲೆ ನಿರಂತರವಾಗಿ ದಾಳಿ ನಡೆಯುತ್ತಿದೆ. ಆ ದಾಳಿ ಈಗ ಕೊನೆ ಹಂತಕ್ಕೆ ಬಂದು ತಲುಪಿದೆ. ಆ ದಾಳಿಯ ಒಂದು ಪ್ರಮುಖ ಭಾಗವೇ ಈ ಎಸ್‌ಐಆರ್ ಎಂದರು. ನಾಗರಿಕ ಹಕ್ಕುಗಳ ಪ್ರತಿಪಾದಕಿ ತಾರಾ ರಾವ್ ಮಾತನಾಡಿ, ನಾವೆಲ್ಲರೂ ಈಗ ಮಾತನಾಡಿ ಕುಗ್ಗಿದ್ದೇವೆ. ಮಾತಾಡುವುದರ ಜೊತೆಗೆ ನಾವು ಹೋರಾಟ ಮಾಡಬೇಕಾಗಿದೆ. ಎಸ್‌ಐಆರ್ ವಿರುದ್ಧ ಬೀದಿಗಿಳಿದು ಹೋರಾಟ ಮಾಡಿ ಜಯ ಗಳಿಸಬೇಕಿದೆ ಎಂದರು.

ಬಳ್ಳಾರಿ:ಸ್ವ-ಉದ್ಯೋಗದಿಂದ ಸ್ವಾವಲಂಬಿ ಜೀವನ



ಬಳ್ಳಾರಿ, ಫೆ. 4

ಮಹಿಳೆಯರು ಸ್ವ-ಉದ್ಯೋಗ ಕೈಗೊಳ್ಳುವ ಮೂಲಕ ಆರ್ಥಿಕ ಅಭಿವೃದ್ಧಿ ಸಾಧಿಸಬೇಕು. ಆ ಮೂಲಕ ಸ್ವಾವಲಂಬಿಗಳಾಗಿ ಜೀವನ ನಿರ್ವಹಿಸಲು ಸಾಧ್ಯ ಎಂದು ಪಿಡಿಒ ಶಿಲ್ಪರಾಣಿ ಹೇಳಿದರು.

ಸಂಜೀವಿನಿ ಮುದ್ದಾಪುರ ಗ್ರಾಪಂ ಮಟ್ಟದ ಮಹಿಳಾ ಒಕ್ಕೂಟದ ನೇತೃತ್ವದಲ್ಲಿ ಗ್ರಾಪಂ ಸಹಯೋಗದಲ್ಲಿ ತಾಲೂಕಿನ ನಂ.10 ಮುದ್ದಾಪುರ ಗ್ರಾಮದ ಹಳೇ ಪಂಚಾಯತ್‌ನಲ್ಲಿ ಆಯೋಜಿಸಿದ್ದ ಸಂಜೀವಿನಿ ಒಕ್ಕೂಟದ ವಾರ್ಷಿಕ ಸಾಮಾನ್ಯ ಸಭೆ ಹಾಗೂ ಮಾದಕ ಜಾಗೃತಿ ಅಭಿಯಾನ ಉದ್ಘಾಟಿಸಿ ಅವರು ಮಾತನಾಡಿದರು. ಸ್ತ್ರೀ-ಶಕ್ತಿ ಸೇರಿದಂತೆ ಒಕ್ಕೂಟದ ಮಹಿಳೆಯರು ಸರಕಾರದ ಸಾಲ-ಸೌಲಭ್ಯಗಳನ್ನು ಸದ್ಬಳಕೆ ಮಾಡಿಕೊಂಡು ಸ್ವ-ಉದ್ಯೋಗ ಕೈಗೊಳ್ಳಬೇಕು. ಆ ಮೂಲ ಕ ಸಮಾಜದ ಮುಖ್ಯ ವಾಹಿನಿಗೆ ಬರ ಬೇಕು ಎಂದರು.

ಒಕ್ಕೂಟದ ಅಧ್ಯಕ್ಷೆ ಶಕುಂತಲಮ್ಮ ಮಾತನಾಡಿ, ಇಂದಿನ ದಿನಮಾನದಲ್ಲಿ ಮಹಿಳೆಯರು ಮುಖ್ಯವಾಹಿನಿಗೆ ಬರುತ್ತಿದ್ದಾರೆ. ಶಿಕ್ಷಣದೊಂದಿಗೆ ಮತ್ತು ಸ್ವ-ಉದ್ಯೋಗದೊಂದಿಗೆ ಆರ್ಥಿಕವಾಗಿ ಅಭಿವೃದ್ಧಿ ಹೊಂದಲು ಮುಂದಾಗಬೇಕು ಎಂದರು.

ಶ್ರೀಗೌರಿ ಮಾತನಾಡಿದರು. ಮಂಜುಳಾ ವಾರ್ಷಿಕ ಸಾಮಾನ್ಯ ಸಭೆಯ ವರದಿ ಮಂಡಿಸಿದರು. ಈ ಸಂದರ್ಭದಲ್ಲಿ ಸುಧಾ, ಸೋಮೇಶ್ವರಿ ಪರಶುರಾಮ, ಜಡೆ ಸಾವಿತ್ರಮ್ಮ ಮಹಾದೇವಪ್ಪ, ಪಾರ್ವತಿ ಮತ್ತಿತರರು ಉಪಸ್ಥಿತರಿದ್ದರು.

ಕನಕಗಿರಿ ಉತ್ಸವಕ್ಕೆ 3 ಕೋಟಿ ರೂ. ಅನುದಾನ ಬಿಡುಗಡೆ: ಡಿಸಿ ಸುರೇಶ್ ಇಟ್ನಾಳ

ಕನಕಗಿರಿ,ಫೆ.04-

ಐತಿಹಾಸಿಕ ಪ್ರಸಿದ್ಧಿಯ ಕನಕಗಿರಿ ಉತ್ಸವದ ಆಚರಣೆಗೆ ಸರ್ಕಾರ ಈಗಾಗಲೇ 3 ಕೋಟಿ ರೂಪಾಯಿ ಅನುದಾನ ಬಿಡುಗಡೆ ಮಾಡಿದ್ದು, ಮುಂದಿನ ದಿನಗಳಲ್ಲಿ ಇನ್ನಷ್ಟು ಅನುದಾನ ಮಂಜೂರು ಮಾಡುವ ಸಾಧ್ಯತೆ ಇದೆ ಎಂದು ಜಿಲ್ಲಾಧಿಕಾರಿ ಸುರೇಶ್ ಇಟ್ನಾಳ ತಿಳಿಸಿದ್ದಾರೆ. ಪಟ್ಟಣದ ತಹಶೀಲ್ದಾರ್ ಕಚೇರಿಯಲ್ಲಿ ಮಂಗಳವಾರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಕನಕಗಿರಿಯ ಕಲಾತ್ಮಕ ಕೆತ್ತನೆಯ ವೆಂಕಟಚಲಪತಿ ಬಾವಿಯನ್ನು ರಾಜ್ಯ ಸಂರಕ್ಷಿತ ಸ್ಮಾರಕವನ್ನಾಗಿ ಘೋಷಿಸಲು ಶಿಫಾರಸು ಮಾಡಲಾಗಿದೆ ಎಂದು ತಿಳಿಸಿದರು. ಬಾವಿಯ ಸಂರಕ್ಷಣೆಗೆ ತಹಶೀಲ್ದಾರ್ ಅವರ ನೇತೃತ್ವದಲ್ಲಿ ಸಮಿತಿ ರಚಿಸಲಾಗುವುದು. ಜೊತೆಗೆ, ಬಾವಿಯಲ್ಲಿ ಮದುವೆ ಪೂರ್ವ ವಿಡಿಯೋ ಚಿತ್ರೀಕರಣ ನಡೆಸುವವರಿಂದ ನಿಗದಿತ ಶುಲ್ಕ ವಸೂಲಿಸಲಾಗುವುದು ಎಂದರು.



ತಾಲ್ಲೂಕಿನಲ್ಲಿ ಅಕ್ರಮ ಮರಳು ದಂಧೆಯನ್ನು ಸಂಪೂರ್ಣವಾಗಿ ನಿಲ್ಲಿಸಲಾಗಿದ್ದು, ಅಕ್ರಮವಾಗಿ ಮರಳು ಸಾಗಿಸುವವರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಲಾ ಗುತ್ತಿದೆ ಎಂದು ಜಿಲ್ಲಾಧಿಕಾರಿ ಹೇಳಿದರು.

ಕಲಕೇರಿ ರಸ್ತೆಯಲ್ಲಿರುವ ನವ ಗ್ರಾಮ ಯೋಜನೆಯ ನಿವೇಶನಗಳನ್ನು ಅರ್ಹ ಫಲಾನುಭವಿಗಳಿಗೆ ಹಂಚಿಕೆ ಮಾಡುವ ಕುರಿತು ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಲಾಗುವುದು ಎಂದರು. ಆನೆಗೊಂದಿ ಉತ್ಸವದ ಆಚರಣೆಗೆ ಸಂಬಂಧಿಸಿ ಸರ್ಕಾರ ಕೆಲವು ಸ್ಪಷ್ಟನೆಗಳನ್ನು ಕೇಳಿರುವುದಾಗಿ ತಿಳಿಸಿದ ಅವರು, ಅದಕ್ಕೆ ಅಗತ್ಯ ಉತ್ತರವನ್ನು ಸಲ್ಲಿಸಲಾಗುವುದು ಎಂದು ಹೇಳಿದರು.

ಪತ್ರಿಕೆ ಓದುವ ಹವ್ಯಾಸ ಬೆಳಸಿಕೊಳ್ಳಿ

ಒಂದನೇಯ ಪುಟದಿಂದ

ಫೆ.5 ಇಂದಿನಿದ ಮೂರು ದಿನಗಳ ಎಡೆದೊರೆ ನಾಡು ರಾಯಚೂರು ಜಿಲ್ಲಾ ಉತ್ಸವ-2026 ಆರಂಭ: ಸಿದ್ಧತೆ ಪೂರ್ಣ

ಯಶಸ್ಸಿ ಗೆ ಶ್ರಮಿಸಬೇಕು ಎಂದು ಜಿಲ್ಲಾ ಉತ್ಸ ವದ ವಿವಿಧ ಸಮಿತಿಗಳಲ್ಲಿನ ಎಲ್ಲ ಅಧಿಕಾರಿಗಳು ಮತ್ತು ಸಿಬ್ಬಂದಿಗೆ ಸೂಚನೆ ನೀಡಿದರು.

ವರ್ಣ ರಂಜಿತ ಆಮಂತ್ರಣ ಪತ್ರಿಕೆ ಬಿಡುಗಡೆ: ಎಡೆದೊರೆ ನಾಡು ರಾಯಚೂರು ಜಿಲ್ಲಾ ಉತ್ಸ ವ-2026ರ ಮೂರು ದಿನಗಳ ಕಾರ್ಯಕ್ರಮದ ಸಮಗ್ರ ಮಾಹಿತಿಯ ವರ್ಣರಂಜಿತ ಆಹ್ವಾನ ಪತ್ರಿಕೆ, ಸಾಂಸ್ಕೃತಿಕ ಕಾರ್ಯಕ್ರಮಗಳ ಮಾಹಿತಿಯ ಆಹ್ವಾನ ಪತ್ರಿಕೆ ಮತ್ತು ವಿವಿಧ ಸಮಿತಿಗಳ ಮಾಹಿತಿ, ಲೈಸನ್ ಅಧಿಕಾರಿಗಳ ವಿವರ, ವೇದಿಕೆ ನಿರ್ವಹಣೆಯ ಅಧಿಕಾರಿಗಳ ವಿವರ ಸೇರಿದಂತೆ ಸಮಗ್ರ ಮಾಹಿತಿಯ ಉತ್ಸ ವದ ಕೈಪಿಡಿ ಒಳಗೊಂಡ ಆಹ್ವಾನ ಪತ್ರಿಕೆಯ ವಿಶೇಷ ಕಿಟ್‌ನ್ನು ಜಿಲ್ಲಾಧಿಕಾರಿಗಳಾದ ನಿತೀಶ್ ಕೆ ಹಾಗೂ ಜಿಲ್ಲಾ ಪಂಚಾಯತ್ ಸಿಇಓ ಈಶ್ವರ್ ಕಾಂದೂ ಮತ್ತು ಪಾಲಿಕೆಯ ಆಯುಕ್ತರಾದ ಜುಬಿನ್ ಮೊಹಪಾತ್ರ ಅವರು ಫೆ.3ರಂದು ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ನಡೆದ ಪತ್ರಿಕಾಗೋಷ್ಠಿ ಸಂದರ್ಭದಲ್ಲಿ ಬಿಡುಗಡೆ ಮಾಡಿದರು. ಬಳಿಕ ಆಹ್ವಾನ ಪತ್ರಿಕೆಗಳನ್ನು ಪತ್ರಕರ್ತರಿಗೆ ವಿತರಿಸಿದರು.

ರಾಯಚೂರು ಬೈಸ್ಕೆ ವಿಶೇಷ ಹೆಲಿಕ್ಯಾಪ್ಟರ್ ರೈಡ್‌ಗೆ ಜಿಲ್ಲಾಧಿಕಾರಿಗಳಾದ ನಿತೀಶ್ ಕೆ ಚಾಲನೆ

ತಾಲೂಕು ಗ್ಯಾರಂಟಿ ಯೋಜನೆಗಳ ಸಮಿತಿಯ ಅಧ್ಯಕ್ಷರಾದ ಪವನ್ ಕುಮಾರ ಕಿಶೋರ್ ಪಾಟೀಲ, ರಾಯಚೂರು ಸಹಾಯಕ ಆಯು ಕ್ತರಾದ ಡಾ.ಹಂಪಣ್ಣ ಸಜ್ಜನ್, ರಾಯಚೂರು ತಹಸೀಲ್ದಾರ ಸುರೇಶ ವರ್ಮಾ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರಾದ ವೀರೇಶ ನಾಯಕ, ಮುಖಂಡರಾದ ರವಿ ಬೋಸರಾಜು, ಈಶ್ವರಿಯ ವಿಶ್ವವಿದ್ಯಾಲಯದ ಸ್ಮಿತಾ ಅಕ್ಕ ಸೇರಿದಂತೆ ಇನ್ನಿತರರು ಇದ್ದರು.

ರಾಯಚೂರು ಜಿಲ್ಲಾ ಉಸ್ತುವಾರಿ ಸಚಿವರ ಪ್ರವಾಸ

ಆಯೋಜನೆಯಾದ ಎಡೆದೊರೆ ನಾಡು ರಾಯಚೂರು ಜಿಲ್ಲಾ ಉತ್ಸ ವ-2026ರ ಉದ್ಘಾಟನಾ ಕಾರ್ಯಕ್ರಮದಲ್ಲಿ ಭಾಗವಹಿಸುವರು. ರಾತ್ರಿ 11.45ಕ್ಕೆ ರಾಯಚೂರಿನಿಂದ ರೈಲಿನ ಮೂಲಕ ಬೆಂಗಳೂರಿಗೆ ಪ್ರಯಾಣ ಬೆಳೆಸಲಿದ್ದಾರೆ ಎಂದು ಸಚಿವರ ಆಪ್ತ ಕಾರ್ಯದರ್ಶಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಾಡಿಗೆ ಮನೆಯಲ್ಲಿ ನೇಣಿಗೆ ಶರಣಾದ ಯುವಕ : ಪೊಲೀಸರಿಂದ ತಪಾಸಣೆ

ಠಾಣೆಯ ಪೊಲೀಸರು ಸ್ಥಳಕ್ಕೆ ಆಗ ಮಿಸಿ ಪರಿಶೀಲನೆ ನಡೆಸಿದರು. ಮೃತನ ವಾಸಸ್ಥಳವನ್ನು ಸುತ್ತುವರಿದು ಅಗತ್ಯ ದಾಖಲೆಗಳನ್ನು ಸಂಗ್ರಹಿಸಿ ಪ್ರಕರಣ ದಾಖಲಿಸಿಕೊಂಡಿದ್ದಾರೆ. ಬಳಿಕ ಘಟನಾ ಸ್ಥಳಕ್ಕೆ ಸಿಪಿಐ ಹಾಗೂ ಡಿವೈಎಸ್ಪಿ ಭೇಟಿ ನೀಡಿ ಅಧಿಕಾರಿ ಗಳಿಂದ ಮಾಹಿತಿ ಪಡೆದು ತನಿಖೆಗೆ ಮಾರ್ಗದರ್ಶನ ನೀಡಿದರು.

ಮೃತದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ನಗರದ ಸಾರ್ವಜನಿಕ ಆಸ್ಪತ್ರೆಯ ಶವಗಾರಕ್ಕೆ ರವಾನೆ ಮಾಡಲಾಗಿದೆ. ಈ ಘಟನೆ ಸಿಂಧನೂರು ನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದ್ದು, ಆತ್ಮಹತ್ಯೆಗೆ ನಿಖರ ಕಾರಣ ತಿಳಿಯಲು ಪೊಲೀಸರು ಹೆಚ್ಚಿನ ತನಿಖೆ ಕೈಗೊಂಡಿದ್ದಾರೆ.

ಸಚಿವರಾದ ಭೋಸರಾಜು ಜಿಲ್ಲಾ ಪ್ರವಾಸ

ನಡೆಯುವ ಕರ್ನಾಟಕ ಸರ್ಕಾರದ ಪಂಚ ಗ್ಯಾರಂಟಿ ಯೋಜನೆಗಳ ಅನುಷ್ಠಾನದ ಕುರಿತು ಜಿಲ್ಲಾ ಮಟ್ಟದ ಪಂಚ ಗ್ಯಾರಂಟಿ ಯೋಜನೆಗಳ ಕಾರ್ಯಾಗಾರ ಹಾಗೂ ರಾಯಚೂರು ಉತ್ಸ ವದ ವಿವಿಧ ಕಾರ್ಯಕ್ರಮಗಳಲ್ಲಿ ಭಾಗಿಯಾಗುವರು.

ಫೆ.8ರಂದು ಬೆಳಗ್ಗೆ ರಾಯಚೂರಿನಿಂದ ನಿರ್ಗಮಿಸಿ ಲಿಂಗಸೂರಿಗೆ ತೆರಳಿ ಕರ್ನಾಟಕ ವಿಧಾನ ಪರಿಷತ್ ಶಾಸಕರಾದ ಶರಣಗೌಡ ಪಾಟೀಲ್ ಬಯ್ಯಾಪೂರ ಅವರ ಖಾಸಗಿ ಕಾರ್ಯಕ್ರಮದಲ್ಲಿ ಭಾಗಿಯಾಗುವರು. ಬೆಳಗ್ಗೆ 10 ಗಂಟೆಗೆ ಲಿಂಗಸೂರಿನಿದ ನಿರ್ಗಮಿಸಿ ಮಾನವಿಗೆ ತೆರಳಿ ಅಲ್ಲಿನ ಸ್ಥಳೀಯ ಕಾರ್ಯಕ್ರಮದಲ್ಲಿ ಭಾಗಿಯಾಗುವರು. ಸಂಜೆ 4 ಗಂಟೆಗೆ ಮಾನವಿಯಿಂದ ನಿರ್ಗಮಿಸಿ ಸಂಜೆ 5 ಗಂಟೆಗೆ ರಾಯಚೂರಿಗೆ ಆಗಮಿಸಿ ಸ್ಥಳೀಯ ಕಾರ್ಯಕ್ರಮದಲ್ಲಿ ಭಾಗಿಯಾಗುವರು. ಬಳಿಕ ರೈಲ್ವೆ ಮಾರ್ಗವಾಗಿ ರಾಯಚೂರಿನಿಂದ ಕೇಂದ್ರ ಸ್ಥಾನ ಬೆಂಗಳೂರಿಗೆ ಪ್ರಯಾಣ ಬೆಳೆಸಲಿದ್ದಾರೆ ಎಂದು ಸಚಿವರ ಆಪ್ತ ಕಾರ್ಯದರ್ಶಿಗಳಾದ ವೀರಭದ್ರ ಹಂಚಿನಾಳ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಣಿಪುರದಲ್ಲಿ ರಾಷ್ಟ್ರಪತಿ ಆಳ್ವಿಕೆ ಮುಕ್ತಾಯ, ಬಿಜೆಪಿ ಸರ್ಕಾರ ಅಸ್ತಿತ್ವಕ್ಕೆ; ನೂತನ ಸಿಎಂ ಆಗಿ ಖೇಮ್‌ಚಂದ್ ಸಿಂಗ್ ಪ್ರಮಾಣ

ಮೈಥಿಸ್ ಮತ್ತು ಕುಕಿ ಸಮುದಾಯಗಳ ನಡುವಿನ ಭೀಕರ ಜನಾಂಗೀಯ ಹಿಂಸಾಚಾರದ ನಂತರ ಬಿರೇನ್ ಸಿಂಗ್ ನೇತೃತ್ವದ ಬಿಜೆಪಿ ಸರ್ಕಾರ ರಾಜೀನಾಮೆ ನೀಡಿತ್ತು.

ಎರಡು ಬುಡಕಟ್ಟು ಸಮುದಾಯಗಳ ಭಯಾನಕ ಸಂಘರ್ಷದಲ್ಲಿ ಕನಿಷ್ಠ 260 ಜನರು ಪ್ರಾಣ ಕಳೆದುಕೊಂಡಿದ್ದು, ಸಾವಿರಾರು ಜನರು ಸ್ಥಳಾಂತರಗೊಂಡಿದ್ದರು.



ಸರಕಾರಿ ಯೋಜನೆಗಳ ಯಶಸ್ಸಿಗೆ ಗ್ರಾಮಸ್ಥರ ಒಗ್ಗಟ್ಟು ಅಗತ್ಯ: ಅರುಣಕುಮಾರ ಎಂ.ವೈ.ಪಾಟೀಲ್

ಅಫಜಲಪುರ ,ಫೆ.03-

ಸರ್ಕಾರದ ಯಾವುದೇ ಒಂದು ಯೋಜನೆ ಗ್ರಾಮಕ್ಕೆ ಬಂದಾಗ ಅದನ್ನು ಸದ್ಬಳಕೆ ಮಾಡಿಕೊಳ್ಳಬೇಕು. ಗ್ರಾಮಸ್ಥರು ಒಗ್ಗಟ್ಟಾಗಿ ಗುತ್ತಿಗೆದಾರರಿಂದ ಗುಣಮಟ್ಟದ ಕೆಲಸ ಪಡೆದುಕೊಂಡಾಗ ಮಾತ್ರ ಸರ್ಕಾರದ ಯೋಜನೆಗಳು ಯಶಸ್ವಿಯಾಗುತ್ತವೆ ಎಂದು ಕೆಕೆಆರ್‌ಟಿಸಿ ಅಧ್ಯಕ್ಷ ಅರುಣಕುಮಾರ ಎಂ.ವೈ. ಪಾಟೀಲ್ ಹೇಳಿದರು.

ತಾಲೂಕಿನ ಶಿವಪುರ ಗ್ರಾಮದಲ್ಲಿ ಲೋಕೋಪಯೋಗಿ ಇಲಾಖೆಯ 202122ನೇ ಸಾಲಿನ ಕೆಕೆಆರ್‌ಡಿಬಿ ಮೈಕ್ರೋ ಯೋಜನೆಯಡಿ 40 ಲಕ್ಷ ರೂ. ಅನುದಾನದಲ್ಲಿ ನಿರ್ಮಿಸಲಾದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ನೂತನ ಕಟ್ಟಡವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಶಿವಪುರ ಗ್ರಾಮದ ಶಾಲಾ ಕಟ್ಟಡವು ಬಹಳ ದಿನಗಳಿಂದ ಉದ್ಘಾಟನೆಯಾಗಿರಲಿಲ್ಲ. ಹಳೆಯ ಕಟ್ಟಡದಲ್ಲಿ ಮಕ್ಕಳಿಗೆ ಸೂಕ್ತ ಕಲಿಕಾ ವಾತಾವರಣವೂ ಇರಲಿಲ್ಲ. ಮಕ್ಕಳ ಭವಿಷ್ಯದ ಹಿತದೃಷ್ಟಿಯಿಂದ 40 ಲಕ್ಷ ರೂ. ವೆಚ್ಚದಲ್ಲಿ ಮೂರು ಹೊಸ ಕೊಠಡಿಗಳನ್ನು ನಿರ್ಮಿಸಲಾಗಿದೆ ಎಂದು ತಿಳಿಸಿದರು.

ಇನ್ನೂ ನಾಲ್ಕು ಹೊಸ ಶಾಲಾ ಕೊಠಡಿಗಳಿಗೆ ಮಂಜೂರಾತಿ ದೊರೆತಿದ್ದು, ಅವುಗಳ ಕಾಮಗಾರಿ ಶೀಘ್ರದಲ್ಲೇ ಆರಂಭವಾಗಲಿದೆ ಎಂದು ಅವರು ಹೇಳಿದರು. ಶಾಲೆಗೆ ಅಗತ್ಯವಿರುವ ಎಲ್ಲಾ ಮೂಲಭೂತ ಸೌಲಭ್ಯಗಳ ಪಟ್ಟಿ ನೀಡಿದಲ್ಲಿ, ಆದ್ಯತೆಯ ಮೇರೆಗೆ ಅವುಗಳನ್ನು ಪೂರೈಸಲಾಗುವುದು ಎಂದು ಭರವಸೆ ನೀಡಿದರು. ಕಾರ್ಯಕ್ರಮದಲ್ಲಿ ದೇಸಾಯಿ ಕಲ್ಲೂರ ಗ್ರಾಮ ಪಂಚಾಯತ್ ಅಧ್ಯಕ್ಷೆ ಕಲ್ಯಾಣಿ ಸಿಂದಗೇರಿ, ಸಿದ್ದಪ್ಪ ದೊಡ್ಮನಿ, ಗುರುಪಾದಗೌಡ ಪಾಟೀಲ್, ಪ್ರಭು ಜಮಾದಾರ, ಹಣಮಂತ ವಾಲಿಕಾರ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಶಾಲಾ ಕಟ್ಟಡ ಹಾಗೂ ರಸ್ತೆ ನಿರ್ಮಾಣ ಕಾರ್ಯಗಳಿಗೆ ಅಕ್ಕಪಕ್ಕದ ಹೊಲಗಳ ಮಾಲಕರು ಅಡೆತಡೆ ಮಾಡಬಾರದು. ಅಡ್ಡಿಪಡಿಸುವುದರಿಂದ ಅಭಿವೃದ್ಧಿಗೆ ಪೆಟ್ಟು ಬೀಳುತ್ತದೆ. ಕೆಕೆಆರ್‌ಟಿಸಿ ಅಧ್ಯಕ್ಷ ಅರುಣಕುಮಾರ ಪಾಟೀಲ್ ಅವರು ನಿರಂತರ ಶ್ರಮವಹಿಸಿ ಸರ್ಕಾರದಿಂದ ಅಭಿವೃದ್ಧಿ ಅನುದಾನ ತರಿಸುತ್ತಿದ್ದಾರೆ.



ಪಂಚ ಗ್ಯಾರಂಟಿಗಳು ಬಡವರ ಆಶಾಕಿರಣ: ಎಸ್.ಎನ್.ರಾಂಪುರ

ಬಾಗಲಕೋಟೆ,ಫೆ.04-

ಸಮೀಪದ ಬೆನಕಟ್ಟಿ ಗ್ರಾಮದಲ್ಲಿ ಸೋಮವಾರ ಜರುಗಿದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಇಲಾಖೆಗಳ ಗ್ರಾಮ ಪಂಚಾಯಿತಿ ಮಟ್ಟದ ಶಿಬಿರ ಉದ್ಘಾಟಿಸಿ ಅವರು ಮಾತನಾಡಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಚುನಾವಣೆ ಸಂದರ್ಭದಲ್ಲಿ ಘೋಷಿಸಿದ ಗ್ಯಾರಂಟಿ ಭರವಸೆಯನ್ನು ಈಡೇರಿಸುವ ಮೂಲಕ ನುಡಿದಂತೆ ನಡೆದುಕೊಂಡಿದೆ ಎಂದು ಹೇಳಿದರು.

ಗ್ರಾಮ ಪಂಚಾಯಿತಿ ಆಡಳಿತಾಧಿಕಾರಿ ಪಿ.ನಾಗರಾಜ್ ಮಾತನಾಡಿ, ಗ್ಯಾರಂಟಿ ಯೋಜನೆಗಳು ಬಹು ಉಪಯುಕ್ತ ಯೋಜನೆಯಾಗಿದ್ದು ಫಲಾನುಭವಿಗಳು ಪ್ರಯೋಜನ ಪಡೆದುಕೊಳ್ಳಬೇಕು ಎಂದರು.

ಮುಖ್ಯ ಅತಿಥಿ ಮಲ್ಲಿಕಾರ್ಜುನ ಮೇಟಿ ಮಾತನಾಡಿ, ಗ್ಯಾರಂಟಿ ಯೋಜನೆಗಳು ಜನಸಾಮಾನ್ಯರು ಅದರಲ್ಲೂ ಗ್ರಾಮೀಣ ಜನರ ಬದುಕನ್ನು ಶ್ರೀಮಂತಗೊಳಿಸಿವೆ ಎಂದು ಹೇಳಿದರು.

ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಸದಸ್ಯರಾದ ಅಮಿನಸಾಬ ಹವಾಲ್ದಾರ್, ರವಿ ಅನವಾಲ ಮಾತನಾಡಿದರು. ಹೆಸ್ಕಾಂ ಬೇವೂರ ವಲಯ ಅಧಿಕಾರಿ ನಾಮದೇವ ರಾಠೋಡ, ಸಾರಿಗೆ ಸಂಸ್ಥೆಯ ಎಚ್.ಆರ್.ಗೌಡರ, ಆಹಾರ ಇಲಾಖೆಯ ಬಂಗಾರ ಗುಂಡ, ಮಹಿಳಾ ಮತ್ತು ಮಕ್ಕಳ ಇಲಾಖೆಯ ಜಯಶ್ರೀ ಕಟಗಿ ಸಂಬಂಧಿತ ಯೋಜನೆಗಳ ಮಾಹಿತಿ ನೀಡಿದರು. ಪಿಕೆಪಿಎಸ್ ಅಧ್ಯಕ್ಷ ವೇಮನ ಯಡಹಳ್ಳಿ, ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷರಾದ ಪಾರ್ವತಿ ಮಾದರ, ಬಾಲವ್ವ ಮಾದರ, ಬಿ.ಆರ್.ಯಡಹಳ್ಳಿ, ಶಿವನಗೌಡ ಪಾಟೀಲ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಜ್ಯೋತಿ ಪಾಟೀಲ, ಶಿಕ್ಷಕ ಪಾಂಡು ಸನ್ನಪ್ಪನವರ ಅತಿಥಿಗಳಾಗಿದ್ದರು.

ಎಂಎಸ್‌ಪಿ ಅಡಿ ಕಡಲೆಕಾಳು ಖರೀದಿ

ಬಳ್ಳಾರಿ,ಫೆ04-

ಜಿಲ್ಲಾಡಳಿತ ಭವನದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಜಿಲ್ಲಾ ಟಾಸ್ಕ್ ಫೋರ್ಸ್ ಸಮಿತಿ ಸಭೆ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಪ್ರತಿ ಕ್ವಿಂಟಲ್‌ಗೆ ?5,875 ಎಂಎಸ್‌ಪಿ ದರದಲ್ಲಿ ರೈತರಿಂದ ಕಡಲೆಕಾಳು ಖರೀದಿಸಲಾಗುತ್ತದೆ. ಖರೀದಿ ಕೇಂದ್ರಗಳನ್ನು ಸ್ಥಾಪಿಸಿ, ಫ್ರೂಟ್ಸ್ ತಂತ್ರಾಂಶದ ಆಧಾರದ ಮೇಲೆ ರೈತರಿಂದ ಖರೀದಿಸಬೇಕು ಎಂದು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಜಿಲ್ಲೆಯಲ್ಲಿ ಬಳ್ಳಾರಿ ಮತ್ತು ಸಿರುಗುಪ್ಪ ಪಟ್ಟಣದಲ್ಲಿ ಖರೀದಿ ಕೇಂದ್ರ ಆರಂಭಿಸಬೇಕಾಗಿದೆ. ಗ'ೋದಾವ'ುಗ'ಳ'ನ್ನು ಸ್ವಚ್ಛವಾಗಿಟ್ಟುಕೊಳ್ಳಬೇಕು, ಮೂಲ ಸೌಕರ್ಯ ಒದಗಿಸಬೇಕು. ತೂಕ ಪ್ರಮಾಣಿಕತೆ ಸೇರಿದಂತೆ ಬೇಕಾದ ಎಲ್ಲ ಅಗತ್ಯ ಸಿದ್ದತೆ ಮಾಡಿಕೊಳ್ಳಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ರೈತರ ನೋಂದಣಿ ಪ್ರಕ್ರಿಯೆ ಪ್ರಾರಂಭವಾಗಿದ್ದು, ಫೆ.12 ರಿಂದ ಮೇ 2ರ ವರೆಗೆ ಉತ್ಪನ್ನ ಖರೀದಿಸಲು ಅವಧಿ ನಿಗದಿಗೊಳಿಸಲಾಗಿದೆ. ರೈತರು ನೋಂದಣಿಗೆ ಆಧಾರ್ ಕಾರ್ಡ್,



ಪಹಣಿ ಪ್ರತಿ, ಆಧಾರ್ ಲಿಂಕ್ ಆಗಿರುವ ಬ್ಯಾಂಕ್ ಪಾಸ್‌ಬುಕ್ ಝೆರಾಕ್ಸ್ ಪ್ರತಿ ಸಲ್ಲಿಸಬೇಕು. ಖರೀದಿ ಕೇಂದ್ರಗಳಲ್ಲಿ ಬಯೋಮೆಟ್ರಿಕ್ ಪಡೆಯುವುದು ಕಡ್ಡಾಯವಾಗಿದ್ದು, ರೈತರು ಇದಕ್ಕೆ ಸಹಕರಿಸಬೇಕು ಎಂದರು.

ಬಳ್ಳಾರಿ: ಮಾರುಕಟ್ಟೆ ಮಧ್ಯಪ್ರವೇಶ ಯೋಜನೆಯಡಿ ಎಫ್.ಎ.ಕ್ಯೂ ಗುಣಮಟ್ಟದ ಮುಂಗಾರು ಹಂಗಾಮಿನ ಮೆಕ್ಕೆಜೋಳ ಉತ್ಪನ್ನಕ್ಕೆ ರೈತರಿಗೆ ಬೆಲೆ ವ್ಯತ್ಯಾಸದ ಮೊತ್ತವನ್ನು ಪಾವತಿಸಲು ಉದ್ದೇಶಿಸಲಾಗಿದ್ದು ನೋಂದಣಿಗೆ ಅವಧಿಯನ್ನು ವಿಸ್ತರಿಸಲಾಗಿದೆ. ರೈತರು ನೋಂದಣಿ ಮಾಡಿಕೊಳ್ಳುವ ಅವಧಿಯನ್ನು ಫೆ.13 ರ ವರೆಗೆ ಹಾಗೂ ಏಕೀಕೃತ ಮಾರುಕಟ್ಟೆ ವ್ಯವಸ್ಥೆ ವೇದಿಕೆ ಮೂಲಕ ಕೃಷಿ ಉತ್ಪನ್ನ ಮಾರುಕಟ್ಟೆ ಮೂಲಕ ಮಾರಾಟ ಮಾಡಿಕೊಳ್ಳಲು ಫೆ.21 ಕೊನೆಯ ದಿನ ಎಂದು ಸರ್ಕಾರ ತಿಳಿಸಿದೆ.

ವಿಶ್ವ ಆಳುವ ಶಕ್ತಿ ಮಗುವಿಗಿದೆ: ಕುರೇರ



ಕೊಪ್ಪಳ,ಫೆ.04-

ಪಟ್ಟಣದ ನೆಹರೂ ಅಂತರ ರಾಷ್ಟ್ರೀಯ ಪಬ್ಲಿಕ್ ಶಾಲೆಯಲ್ಲಿ ಶನಿವಾರ ಜರುಗಿದ ಸಂಸ್ಥೆಯ ವಾರ್ಷಿಕೋತ್ಸವ ಸಮಾರಂಭದಲ್ಲಿ ಮಾತನಾಡಿದರು.

ಮಗುವಿಗೆ ಆಸಕ್ತಿ ಕ್ಷೇತ್ರ ಗುರುತಿಸಿ ಮಾರ್ಗದರ್ಶನ ನೀಡಬೇಕು. ಶಿಕ್ಷಣದಲ್ಲಿ ಮೌಲ್ಯ ಮತ್ತು ಸಂಸ್ಕಾರ ನೀಡಬೇಕು ಮತ್ತು ಮೊಬೈಲ್ ಗೀಳಿನಿಂದ ದೂರ ಇಟ್ಟಾಗ ಉತ್ತಮ ಸಾಧನೆ ಮಾಡಲು ಸಾಧ್ಯ ಎಂದು ಹೇಳಿದರು.

ಜಿಲ್ಲಾ ಪೊಲೀಸ್ ವರಿಷ್ಠಧಿಕಾರಿ ಸಿದ್ಧಾರ್ಥ ಗೋಯಲ್ ಮಾತನಾಡಿ, ಮಕ್ಕಳ ಬೆಳವಣಿಗೆಯಲ್ಲಿ ಪಾಲಕರ ಮತ್ತು ಸಂಸ್ಥೆಯ ಪಾತ್ರ ದೊಡ್ಡದು. ಮಕ್ಕಳು ಆನ್‌ಲೈನ್ ಗೇಮ್ ಆಡದಂತೆ ನೋಡಿಕೊಳ್ಳಬೇಕು. ಮಕ್ಕಳಿಗೆ ಹಲವು ಉತ್ತಮ ಅಭಿರುಚಿ ಬೆಳೆಸಿ ಸಾಧನೆಯನ್ನು ಮಾಡುವ ವಾತಾವರಣ ಕಲ್ಪಿಸಬೇಕು ಎಂದು ಹೇಳಿದರು.

ಚಿತ್ರನಟಿ ಶರಣ್ಯ ಶೆಟ್ಟಿ ಮಾತನಾಡಿದರು. ಎಸ್.ಎಸ್.ಎಲ್.ಸಿ ಸಾಧಕರನ್ನು, ಕ್ರೀಡೆ, ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ಭಾಗವಹಿಸಿ ಬಹುಮಾನ ಪಡೆದ ಸಾಧಕರನ್ನು ಗೌರವಿಸಲಾಯಿತು. ವಿರೇಶ ಅಂಗಡಿ ರಚಿಸಿದ ಚಾಲುಕ್ಯ ಪ್ರವಾಸಿ ಮಾರ್ಗದರ್ಶಿ ಕೈಪಿಡಿಯನ್ನು ಬಿಡುಗಡೆಗೊಳಿಸಲಾಯಿತು. ನಂತರ ಇತ್ತೀಚಿಗೆ ನಿಧನರಾದ ಬಾಗಲಕೋಟೆ ಶಾಸಕ ದಿ.ಎಚ್.ವೈ. ಮೇಟಿಯವರ ಚಿತ್ರಕ್ಕೆ ಪುಷ್ಪಾರ್ಪಣೆ ಮಾಡಲಾಯಿತು.

ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಹೊಳೆಬಸು ಶೆಟ್ಟರ, ಕುಮಾರೇಶ್ವರ ಸಹಕಾರ ಸಂಘದ ಅಧ್ಯಕ್ಷ ಎಂ.ಬಿ. ಹಂಗರಗಿ, ಜಿಲ್ಲಾ ಪಂಚಾಯಿತಿ ಮಾಜಿ ಉಪಾಧ್ಯಕ್ಷ ಪಿ.ಆರ್. ಗೌಡರ, ಸಂಸ್ಥೆಯ ಅಧ್ಯಕ್ಷ ಮಹಾಂತೇಶ ಸರಗಣಾಚಾರಿ, ಉಪಾಧ್ಯಕ್ಷ ವಿರೇಶ ಚಿಂದಿ, ಮಲ್ಲಿಕಾರ್ಜುನ ಮೇಟಿ, ಪಕ್ವಾನ್ ಗ್ರುಫ್ ಮುಖ್ಯಸ್ಥ ಪವನ್ ಸೀಮಿಕೇರಿ, ಪ್ರಾಚಾರ್ಯ ಮಹೇಶ ಸರೋದೆ, ಎಂ.ಬಿ. ಕುಬಕಡ್ಡಿ, ಶಿವಾನಂದ ಯರಗಲ್ ಇದ್ದರು.

ಮೇಲ್ಮನೆಯಲ್ಲಿ ನಾ ಕೊಡೆ.. ನೀ ಬಿಡೆ.. ಪರಿಸ್ಥಿತಿ: ಪಾಕ್ ನಾಲಿಗೆ ವಿಚಾರವಾಗಿ ವಿಷಾದ ವ್ಯಕ್ತಪಡಿಸಲು ಆಡಳಿತ ಪಕ್ಷ ಪಟ್ಟು; ಮಣಿಯದ ವಿಪಕ್ಷ



ಬೆಂಗಳೂರು,ಫೆ.04-

ಕಾಂಗ್ರೆಸ್ ಸದಸ್ಯ ನಜೀರ್ ಅಹಮದ್ ವಿರುದ್ಧ ಪಾಕಿಸ್ತಾನದ ನಾಲಿಗೆ ಎಂದು ಹೇಳಿಕೆ ನೀಡಿದ್ದ ಆರೋಪ ಸಂಬಂಧ ಬಿಜೆಪಿ ಸದಸ್ಯ ಸಿ.ಟಿ. ರವಿ ಅವರು ವಿಷಾದ ವ್ಯಕ್ತಪಡಿಸಬೇಕೆಂಬ ಆಡಳಿತ ಪಕ್ಷದ ಪಟ್ಟಿಗೆ ವಿರೋಧ ಪಕ್ಷ ಮಣಿಯದ ಪರಿಣಾಮ ಇಂದು ಅನಗತ್ಯ ಚರ್ಚೆಯಾಗಿ ಅರ್ಧ ದಿನದ ಕಲಾಪ ನುಂಗುವಂತೆ ಮಾಡಿತು.

ನಾ ಕೊಡೆ.. ನೀ ಬಿಡೆ.. ಎಂಬ ಮಾತಿನಂತೆ ಆಡಳಿತ ಹಾಗೂ ಪ್ರತಿಪಕ್ಷಗಳ ನಡುವೆ ಪರ-ವಿರೋಧ ಹೇಳಿಕೆಗಳಿಗಷ್ಟೇ ಸೀಮಿತವಾಯಿತು. ಜಂಟಿ ಅಧಿವೇಶನದ ಕೊನೆ ದಿನವಾಗಿರುವ ಇಂದು ವಿಬಿ ಜಿ - ರಾಮ್ ಜಿ ಕುರಿತ ಚರ್ಚೆಯ ನಿರೀಕ್ಷೆಯಲ್ಲಿದ್ದ ಮೇಲ್ಮನೆ ಸದಸ್ಯರಿಗೆ ನಿರಾಸೆಯಾಯಿತು.

ಇಂದು ಸದನ ಆರಂಭವಾಗುತ್ತಿದ್ದಂತೆ ಸಭಾನಾಯಕ ಎನ್.ಎಸ್. ಬೋಸರಾಜು ಮಾತನಾಡಿ, ಸುಗಮ ಕಲಾಪ ದೃಷ್ಟಿಯಿಂದ ಸಿ.ಟಿ. ರವಿ ಅವರು ವಿಷಾದ ವ್ಯಕ್ತಪಡಿಸಬೇಕೆಂಬ ಮಾತಿಗೆ ಆಡಳಿತ ಪಕ್ಷದ ಮುಖ್ಯ ಸಚೇತಕ ಸಲೀಂ ಅಹ್ಮದ್ ಧ್ವನಿಗೂಡಿಸಿದರು. ವಿಷಾದ ಕೇಳಬೇಕೆಂದು ಪೀಠದಿಂದ ಐದು ಬಾರಿ ಮನವಿ ಮಾಡಲಾಗಿದೆ. ಇದನ್ನು ಪುರಸ್ಕರಿಸಿ ರವಿ ಅವರ ವಿರುದ್ಧ ಕ್ರಮಕ್ಕೆ ರೂಲಿಂಗ್ ನೀಡಬೇಕೆಂದು ಸಭಾಪತಿ ಬಸವರಾಜ ಹೊರಟ್ಟಿಗೆ ವಿನಂತಿಸಿದರು.

ಮೇಲ್ಮನೆ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಮಾತನಾಡಿ, ಸಿ.ಟಿ. ರವಿ ಹೇಳಿರುವ ಪದ ಅಸಂಸದೀಯವಲ್ಲ. ಆದಾಗ್ಯೂ ಕಡತದಿಂದ ಆ ಪದವನ್ನು ತೆಗೆದುಹಾಕಲಾಗಿದೆ. ಇದಕ್ಕೆ ನಾವು ಒಪ್ಪಿಕೊಂಡಿದ್ದೇವೆ. ಸದಸ್ಯರು ಆತ್ಮವಿಮರ್ಶೆ ಮಾಡಿಕೊಳ್ಳಬೇಕಿದೆ ಎಂದು ನಿನ್ನೆ ಪೀಠ ಸಹ ಹೇಳಿದೆ. ಇದನ್ನು ಮುಂದುವರೆಸುವುದು ಸರಿಯಲ್ಲ. ಹೀಗಾಗಿ ರವಿ ಅವರು ಕ್ಷಮೆ ಕೇಳುವ ಅಗತ್ಯವಿಲ್ಲ ಎಂದು ಸ್ಪಷ್ಟಪಡಿಸಿದರು.

ಹೆಣ್ಣು ಕುಲಕ್ಕೆ ಅವಮಾನ: ಪರ-ವಿರೋಧ ಚರ್ಚೆ ಮಧ್ಯೆ ಬಿ.ಕೆ. ಹರಿಪ್ರಸಾದ್ ಮಾತನಾಡಿ, ಕಳೆದ ವಾರ ಸದನದಲ್ಲಿ ಮಹಿಳೆಯರ ಕುರಿತ ಆಕ್ಷೇಪಾರ್ಹ ಹೇಳಿಕೆ ನೀಡಿರುವುದಾಗಿ ವಿರೋಧ ಕೇಳಿಬಂದ ಹಿನ್ನೆಲೆಯಲ್ಲಿ ಸಭಾನಾಯಕರು, ಕಾನೂನು ಸಚಿವರ ಸಲಹೆ ಮೇರೆಗೆ ಸದನದಲ್ಲಿ ತಾವು ವಿಷಾದ ವ್ಯಕ್ತಪಡಿಸಿದ್ದೆವು ಎಂದು ಹೇಳುತ್ತಿದ್ದಂತೆ ಬಿಜೆಪಿ ಆಕ್ಷೇಪ ವ್ಯಕ್ತಪಡಿಸಿತು.

ಈ ವೇಳೆ ಪ್ರತಿಕ್ರಿಯಿಸಿದ ಭಾರತಿ ಶೆಟ್ಟಿ, ಹರಿಪ್ರಸಾದ್ ಅವರು ಮಹಿಳೆಯರಿಗೆ ಅವಮಾನ ಮಾಡಿದ್ದಾರೆ. ನಾನು ಆರ್‌ಎಸ್‌ಎಸ್‌ನಿಂದ ಬಂದವಳು. ಸಾರಾಸಗಟಾಗಿ ಮಹಿಳೆಯರ ಬಗ್ಗೆ ಕೀಳು ಮಟ್ಟದ ಹೇಳಿಕೆ ನೀಡಿರುವುದು ಸರಿಯಲ್ಲ. ಈ ಸದನದಲ್ಲಿ ನನಗೆ ಅಗೌರವ ತೋರಿದರೆ ಹೊರಗೆ ಹೇಗೆ ಗೌರವ ಸಿಗುತ್ತದೆ? ಎಂದು ಪ್ರಶ್ನಿಸಿದರು.

ಹೆಣ್ಣುಮಕ್ಕಳ ಕುರಿತು ಹೇಳಿದ ಮಾತನ್ನು ಕಡತದಿಂದ ತೆಗೆಯದಿದ್ದರೆ ಹೆಣ್ಣಿನ ಕುಲಕ್ಕೆ ಮಾಡಿದ ಅಪಮಾನವಾಗಲಿದೆ. ಈ ಬಗ್ಗೆ ಪರಿಶೀಲಿಸಿ ಕ್ರಮ ಕೈಗೊಳ್ಳುವುದಾಗಿ ಸಭಾಪತಿಗಳು ಆಶ್ವಾಸನೆ ನೀಡಿದರು.

ಬಿಜೆಪಿ ಸದಸ್ಯ ವೈ.ಎಂ. ಸತೀಶ್ ಮಾತನಾಡಿ 10 ದಿನಗಳ ಅಧಿವೇಶನ ವಾಶ್ ಔಟ್ ಆಗಿದೆ. ಜನರ ಕಷ್ಟ ಸುಖದ ಬಗ್ಗೆ ಚರ್ಚೆ ಆಗಿಲ್ಲ. ಪರಸ್ಪರ ವೈಯಕ್ತಿಕ ನಿಂದನೆ ಹೊರಗೆ ಮಾಡದೆ ಇಲ್ಲಿ ಮಾಡುತ್ತಿರುವುದು ಅರ್ಥಹೀನ. ರಾಜ್ಯದ ಸಮಸ್ಯೆ ಹಾಗೂ ಅದರ ಪರಿಹಾರಗಳ ಬಗ್ಗೆ ಈವರೆಗೂ ಯಾವ ಸದಸ್ಯರು ಚರ್ಚಿಸಿಲ್ಲ. ಅನಾರೋಗ್ಯಕರ ಮಾತುಗಳನ್ನು ಆಡಿ ಕಲಾಪದ ಸಮಯ ವ್ಯರ್ಥ ಮಾಡುತ್ತಿದ್ದೇವೆ. ಇದು ಒಳ್ಳೆಯ ಬೆಳವಣಿಗೆಯಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಗುರುವಿನ ಮಾರ್ಗದರ್ಶನ ಅಗತ್ಯ: ಮಹಾದೇವ ಸರಸ್ವತಿ ಸ್ವಾಮೀಜಿ



ಬಾಗಲಕೋಟೆ,ಫೆ.04-

ಬನಹಟ್ಟಿಯ ಸಿದ್ಧಾರೂಢ ಮಠದ ಶತಮಾನೋತ್ಸವ ಮತ್ತು ಅಕ್ಕಲಕೋಟ ರೇವಣಸಿದ್ದೇಶ್ವರರ 164ನೇ ಜಯಂತ್ಯುತ್ಸವದ ಅಂಗವಾಗಿ ಹಮ್ಮಿಕೊಂಡ ಪ್ರವಚನ ಕಾರ್ಯಕ್ರಮದಲ್ಲಿ ಬೈಲಹೊಂಗಲದ ಮಹಾದೇವ ಸರಸ್ವತಿ ಸ್ವಾಮೀಜಿ ಮಾತನಾಡಿದರು

ಅವರು ಸೋಮವಾರ ಇಲ್ಲಿನ ಈಶ್ವರಲಿಂಗ ಮೈದಾನದ ಸಮುದಾಯ ಭವನದಲ್ಲಿ ಸಿದ್ಧಾರೂಢ ಮಠದ ಶತಮಾನೋತ್ಸವ ಹಾಗೂ ಅಕ್ಕಲಕೋಟ ರೇವಣಸಿದ್ದೇಶ್ವರ ಶರಣರ 164 ನೇ ಜಯಂತ್ಯುತ್ಸವದ ಅಂಗವಾಗಿ ಹಮ್ಮಿಕೊಂಡ ಪ್ರವಚನ ಕಾರ್ಯಕ್ರಮದಲ್ಲಿ ಮಾತನಾಡಿದರು.

ರೇವಣಸಿದ್ದೇಶ್ವರ ಶರಣರ ಪ್ರವಚನವನ್ನು ಆಲಿಸುವುದರಿಂದ ಜೀವನವು ಪಾವನವಾಗುತ್ತದೆ ಎಂದು ಹೇಳಿದರು.

ಹಲಗೇರಿಯ ಶಂಕರ ಶಾಸ್ತ್ರಿಗಳು ಮಾತನಾಡಿ, ಅಧ್ಯಾತ್ಮಿಕ ಚಿಂತನೆಯ ಜೊತೆಗೆ ಉತ್ತಮ ಶಿಕ್ಷಣ ಪಡೆದುಕೊಳ್ಳಬೇಕು ಎಂದರು.

ಮೈದರಗಿಯ ಅಭಿನವ ರೇವಣಸಿದ್ಧ ಶರಣರು ಮಾತನಾಡಿ, ಸಂಸ್ಕಾರ ಮತ್ತು ಧರ್ಮದ ಕೊರತೆ ಎಲ್ಲಿ ಇರುತ್ತದೆಯೋ ಅಲ್ಲಿ ಮಹಾತ್ಮರು ಜನ್ಮ ತಾಳುತ್ತಾರೆ. ನಿಸ್ವಾರ್ಥ ಭಾವದಿಂದ ದಾನ ಮಾಡಬೇಕು. ಸಂಸಾರದಲ್ಲಿ ಮೋಹ ಇರಬಾರದು ಧರ್ಮದ ಆಚರಣೆ ಇರಬೇಕು ಎಂದರು.

ಸೋಮವಾರ ಪೇಟೆ ಸಮಸ್ತ ದೈವ ಮಂಡಳಿಯ ಅಧ್ಯಕ್ಷ ಮಲ್ಲಿಕಾರ್ಜುನ ತುಂಗಳ, ಶ್ರೀಶೈಲ ಶೀಲವಂತ, ಶೇಖರ ಹಕ್ಕಲದಡ್ಡಿ, ಘೂಳಪ್ಪ ಮುಳೆಗಾವಿ, ಗಂಗಾಧರ ಅಥಣಿ, ಶಿವಾನಂದ ಬುದ್ನಿ, ಶಂಕರಅಥಣಿ, ಪ್ರಭಾವತಿ ಸುಟ್ಟಟ್ಟಿ ಭಾಗವಹಿಸಿದ್ದರು.



ಜನಪದ ಕಲೆಗಳನ್ನು ಪ್ರೋತ್ಸಾಹಿಸಿ

ಬಾಗಲಕೋಟೆ,ಫೆ.04-

ತಾಲ್ಲೂಕಿನ ಎಂ.ಬಸಾಪುರ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಆವರಣದಲ್ಲಿ ಮಂಗಳವಾರ ರಂಗನೇಸರ ಸಾಂಸ್ಕೃತಿಕ ಕಲಾ ಸಂಘದ ವತಿಯಿಂದ ಹಮ್ಮಿಕೊಂಡಿದ್ದ ಡೊಳ್ಳು ಕುಣಿತ ತರಬೇತಿ ಕಾರ್ಯಾಗಾರ ಕಾ'ರ್ಯ'ಕ್ರ'ವ'ುದ'ಲ್ಲಿ ಮಾತನಾಡಿದರು.

ಪ್ರಸ್ತುತ ದಿನಗಳಲ್ಲಿ ಗ್ರಾಮೀಣ ಜನಪದ ಕಲೆಗಳು ನಶಿಸಿ ಮೂಲೆ ಗುಂಪಾಗಿದ್ದು, ಕಲೆಗಳಿಗೆ ಮರು ಜೀವ ತುಂಬುವ, ಪ್ರೋತ್ಸಾಹ ಕಲ್ಪಿಸುವ ದೃಷ್ಟಿಯಿಂದ ಗ್ರಾಮೀಣ ಭಾಗದಲ್ಲಿ ರೈತಾಪಿ ಮಕ್ಕಳಿಗೆ ನಿರಂತರವಾಗಿ ತರಬೇತಿ ನೀಡಲಾಗುತ್ತಿದೆ ಎಂದರು.

ಬಸಾಪುರ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕ ಶಿವಲಿಂಗಪ್ಪ ಮಾತನಾಡಿ,

ಜಾನಪದ ಗೀತೆ, ಲಾವಣಿ, ನಾಟಕ, ನೃತ್ಯ, ಪುರಾಣ ಕಥೆಗಳು ಸೇರಿದಂತೆ ಇತರೆ ಗ್ರಾಮೀಣ ಸೊಗಡಿನ ಕಲೆಗಳು ಅವನತಿಯ ಅಂಚಿಗೆ ತಲುಪಿದ್ದು, ಇಂತಹ ಕಲೆಗಳನ್ನು ಯುವಜನರಲ್ಲಿ ಬಿತ್ತುವ ಕೆಲಸವನ್ನು ರಂಗನೇಸರ ಸಾಂಸ್ಕೃತಿಕ ಕಲಾ ಸಂಘದವರು ಮಾಡುತ್ತಿರುವುದು ಸಂತಸದ ವಿಚಾರ ಎಂದರು

ರಂಗನೇಸರ ಸಾಂಸ್ಕೃತಿಕ ಕಲಾ ಸಂಘದ ಉಪಾಧ್ಯಕ್ಷ ಮುರುಣ್ಣೆ ಶಿಲಪ್ಪ, ಮುಖಂಡರಾದ ಹನುಮಂತರೆಡ್ಡಿ, ಪ್ರವೀಣ್ ಕುಮಾರ್, ಯಲ್ಲಪ್ಪ ಶಾಲೆಯ ಶಿಕ್ಷಕರು, ಮಕ್ಕಳು ಇದ್ದರು.

ಮಹಿಳೆಯರ ಸಬಲೀಕರಣಕ್ಕಾಗಿ ಗ್ಯಾರಂಟಿ ಯೋಜನೆ: ಅಣವೀರಯ್ಯ ಪ್ಯಾಟಿಮಠ

ಬಾಗಲಕೋಟೆ,ಫೆ.04-

ತಾಲ್ಲೂಕಿನ ನಾಗರಾಳ, ಹೆಗ್ಗೂರ ಹಾಗೂ ಹೊಸ ಕೊರ್ತಿ ಗ್ರಾಮದಲ್ಲಿ ತಾಲ್ಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ಹಾಗೂ ಗ್ರಾಮ ಪಂಚಾಯಿತಿಗಳ ಸಹಯೋಗದಲ್ಲಿ ಮಂಗಳವಾರ ಏರ್ಪಡಿಸಿದ್ದ ಗ್ಯಾರಂಟಿ ಯೋಜನೆಗಳ ಸಾರ್ವಜನಿಕ ಕುಂದು ಕೊರತೆ ಸಭೆ ಉದ್ದೇಶಿಸಿ ಅವರು ಮಾತನಾಡಿದರು. ಸಾಮಾಜಿಕ ಚಿಂತನೆಯೊಂದಿಗೆ ಈ ಗ್ಯಾರಂಟಿ ಯೋಜನೆಗಳನ್ನು ಸರ್ಕಾರ ರೂಪಿಸಿದೆ ಎಂದರು.

ಗ್ಯಾರಂಟಿ ಅನುಷ್ಠಾನ ಸಮಿತಿ ಸದಸ್ಯ ಹನಮಂತ ಸೂಳಿಕೇರಿ ಪ್ರಾಸ್ತಾವಿಕವಾಗಿ ಮಾತನಾಡಿ, ಜನಸಾಮಾನ್ಯರ ಆರ್ಥಿಕ ಸ್ಥಿತಿಗತಿ ಸುಧಾರಿಸಲು ಗ್ಯಾರಂಟಿ ಯೋಜನೆ ಸಹಕಾರಿಯಾಗಿದೆ ಎಂದರು.

ತಾಲ್ಲೂಕು ಪಂಚಾಯಿತಿ ಅಧಿಕಾರಿ ಮಾಹಾನಂದ ಭೂಷಗೊಂಡ , ಹೆಸ್ಕಾಂ ಇಲಾಖೆಯ ಎಇಇ ಮಂಜುನಾಥ ಬೋಕಿ, ಅಧಿಕಾರಿ ಮಹಾಂತೇಶ ಹೊನ್ನಾಳ, ಆಹಾರ ಇಲಾಖೆಯ ಎ.ಎಲ್.ಸನದಿ, ಎಸ್.ಕೆ. ಭಜಂತ್ರಿ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಭಾಗ್ಯಾ ಜಾಧವ, ಕೆ.ಎಸ್.ಆರ್.ಟಿ.ಸಿ ಅಧಿಕಾರಿ ಮಹಾಂತೇಶ ಬಿರಾದಾರ ಇದ್ದರು.

ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿಯ ಸದಸ್ಯರಾದ ರಸೂಲ ಮುಜಾವಾರ, ಸದಾಶಿವ ಜುಂಜೂರಿ, ಎಂ.ಆರ್. ಪಾಟೀಲ, ಚಂದಶೇಖರ ಪಂಡರಿ, ವೆಂಕನಗೌಡ ಪಾಟೀಲ ಇದ್ದರು. ಹೆಗ್ಗೂರ, ಹೊಸ ಕೊರ್ತಿ, ನಾಗರಾಳ ಗ್ರಾಮಗಳ ಪ್ರಮುಖರಾದ ಸತ್ಯಪ್ಪ ಮೇಲ್ನಾಡ, ಗೋಪಾಲ ಇದ್ದರು.

ನಿಮ್ಮೂರು ಸುದ್ದಿ

ಸಂಪಾದಕೀಯ

ಮೋದಿ ಸರ್ಕಾರ ಮಹಾತ್ಮ ಗಾಂಧಿ ಉದ್ಯೋಗ ಖಾತ್ರಿ ಕಾಯ್ದೆಗೆ ಹೆದರಿದ್ದೇಕೆ?

ಕೇಂದ್ರ ಗಾಂಧಿ ಹೆಸರಿನ ಉದ್ಯೋಗ ಖಾತ್ರಿ ಕಾನೂನನ್ನು ತೆಗೆದು ಹಾಕಿ, ರಾಮನ ಹೆಸರಿನಲ್ಲಿ ಇದನ್ನು ತನ್ನ ತೆಕ್ಕೆಗೆ ತೆದುಕೊಂಡು ಮೂಗಿಗೆ ತುಪ್ಪ ಹಚ್ಚುವ ಸುಳ್ಳು ಉದ್ಯೋಗ ಭರವಸೆಯ ಕಾನೂನನ್ನು ತಂದು, ಗ್ರಾಮೀಣ ಕೂಲಿಕಾರರನ್ನು ಮೋಸ ಮಾಡುವ ಕುತಂತ್ರಕ್ಕೆ ಈ ಸರ್ಕಾರ ಕೈ ಹಾಕಿದೆ. ಈ ಮೂಲಕ ಬಂಡವಾಳಿಗರನ್ನು ಗ್ರಾಮ ಪಂಚಾಯಿತಿಗಳಿಗೂ ತುರುಕುವ ಹುನ್ನಾರ ನಡೆಯುತ್ತಿದೆ.

ನಮ್ಮ ಸಂವಿಧಾನವು ಬದುಕುವ ಹಕ್ಕನ್ನು ಮೂಲಭೂತ ಹಕ್ಕಾಗಿ ಖಚಿತಪಡಿಸಿದೆ. ಆದರೆ ಬದುಕುವ ಹಕ್ಕು ವಾಸ್ತವವಾಗಿ ಖಾತ್ರಿಯಾಗಬೇಕಾದರೆ ಉದ್ಯೋಗದ ಹಕ್ಕು ಅವಶ್ಯಕ.

ಈ ಸತ್ಯದ ಬಗ್ಗೆ ಸಂವಿಧಾನದ ಶಿಲ್ಪಿ ಡಾ. ಬಾಬಾಸಾಹೇಬ ಅಂಬೇಡ್ಕರ್ ಅವರಿಗೆ ಸಂಪೂರ್ಣ ಅರಿವಿತ್ತು. ಆದರೆ ಸಂವಿಧಾನವನ್ನು ಸ್ವೀಕರಿಸಿದ 1950ರ ಜನವರಿ 26ರಿಂದಲೇ ಉದ್ಯೋಗದ ಹಕ್ಕನ್ನು ತಕ್ಷಣ ಜಾರಿಗೊಳಿಸುವುದು ವ್ಯಾವಹಾರಿಕವಾಗಿರಲಿಲ್ಲ. ಆದ್ದರಿಂದ ಅದನ್ನು ಸಂವಿಧಾನದ ನೀತಿ ನಿರ್ದೇಶಕ ತತ್ವಗಳಲ್ಲಿ ಸೇರಿಸಿ, ಸರ್ಕಾರವು ಆದಷ್ಟು ಬೇಗ ಉದ್ಯೋಗದ ಹಕ್ಕು ಜನರಿಗೆ ಲಭ್ಯವಾಗುವಂತೆ ಸೂಕ್ತ ನೀತಿ-ದೋರಣೆಗಳನ್ನು ರೂಪಿಸಬೇಕು ಎಂದು ಸೂಚಿಸಲಾಗಿತ್ತು.

ಈ ಹಿನ್ನೆಲೆಯಲ್ಲೇ 2005ರಲ್ಲಿ ಜಾರಿಗೆ ಬಂದ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಕಾಯ್ದೆ ಒಂದು ಮಹತ್ವದ ಮೊದಲ ಹೆಜ್ಜೆಯಾಗಿತ್ತು. ಸಂವಿಧಾನ ಸ್ವೀಕಾರದ 55 ವರ್ಷಗಳ ನಂತರ, ಜನ ಸಂಘಟನೆಗಳು ಹಾಗೂ ಚಳವಳಿಗಳ ಒತ್ತಡದ ಫಲವಾಗಿ ಆಗಿನ ಕಾಂಗ್ರೆಸ್ ಸರ್ಕಾರ ಈ ಕಾನೂನನ್ನು ಜಾರಿಗೆ ತಂದಿತು.

ಲೋಕಸಭೆಯಲ್ಲಿ ಸುದೀರ್ಘ ಚರ್ಚೆಯ ಬಳಿಕ, ಎಲ್ಲ ಪಕ್ಷಗಳ ಸದಸ್ಯರು ಒಮ್ಮತದಿಂದ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಕಾನೂನನ್ನು ಅಂಗೀಕರಿಸಿ ಇತಿಹಾಸ ನಿರ್ಮಿಸಿದರು.

ಹಾಗಿದ್ದರೆ ಈ ಕಾನೂನು ಪರಿಪೂರ್ಣವಾಯಿತೇ? ಖಂಡಿತವಾಗಿಯೂ ಇಲ್ಲ. ಮಾನವ ಹಕ್ಕುಗಳು ಯಾವಾಗಲೂ ಪ್ರತಿ ವ್ಯಕ್ತಿಗೆ ಸಲ್ಲುವ ಹಕ್ಕುಗಳಾಗಿರಬೇಕು. ಆದರೆ ಈ ಕಾನೂನು ಪ್ರತಿ ವರ್ಷ ಒಂದು ಗ್ರಾಮೀಣ ಕುಟುಂಬಕ್ಕೆ 100 ದಿನಗಳ ಉದ್ಯೋಗದ ಖಾತ್ರಿ ಮಾತ್ರ ನೀಡುತ್ತಿತ್ತು. ನಮ್ಮ ಪಕ್ಕದ ರಾಜ್ಯ ಮಹಾರಾಷ್ಟ್ರದಲ್ಲಿ 1978ರಿಂದಲೇ ಉದ್ಯೋಗ ಖಾತ್ರಿ ಕಾನೂನಿನ ಅಡಿಯಲ್ಲಿ ಪ್ರತಿ ವ್ಯಕ್ತಿಗೆ 365 ದಿನಗಳ ಉದ್ಯೋಗದ ಹಕ್ಕು ನೀಡುವ ಕಾನೂನು ಜಾರಿಯಲ್ಲಿದೆ. ಈ ರೀತಿಯ ಕುಂದುಕೊರತೆಗಳನ್ನು ಸೂಚಿಸಬಹುದು. ಆದರೆ ಗ್ರಾಮೀಣ ಉದ್ಯೋಗ ಸೃಷ್ಟಿ ಹಾಗೂ ಉತ್ಪಾದಕ ಸ್ಥಿರ ಆಸ್ತಿ ನಿರ್ಮಾಣಈ ಎರಡೂ ಗುರಿಗಳನ್ನು ಈಡೇರಿಸುವ ನಿಟ್ಟಿನಲ್ಲಿ ಈ ಕಾನೂನು ಕ್ರಾಂತಿಕಾರಿ ಹೆಜ್ಜೆಯಾಗಿತ್ತು.

ಈ ಕಾನೂನು ಜಾರಿಯಾದ ದಿನದಿಂದಲೇ ಬಂಡವಾಳಶಾಹಿಗಳು ಹಾಗೂ ಅವರ ಬಾಲಬಡಕರಾದ ಕೆಲ ಮಧ್ಯಮವರ್ಗದ ವಿಚಾರವಂತರು, ನಮ್ಮ ದೇಶವು ಇದರಿಂದ ದಿವಾಳಿಯಾಗುತ್ತದೆಂದು ಗುಲ್ಲೆಬ್ಬಿಸಿದ್ದರು. ಸ್ತ್ರೀಪುರುಷರಿಗೆ ಸಮಾನ ಕೂಲಿಯ ಖಾತ್ರಿ ಗ್ರಾಮೀಣ ಶ್ರಮಿಕರಿಗೆ ದೊರಕಿದ ಪರಿಣಾಮ ಒಟ್ಟಾರೆ ಕೂಲಿ ದರ ಏರಿಕೆಯಾಗಿ ಮಾಲೀಕರಿಗೆ ಹೊಟ್ಟೆನೋವು ಶುರುವಾಯಿತು. ಬಂಡವಾಳದ ಕೈಗಾರಿಕೋದ್ಯಮಿಗಳಿಗೆ ಸವಲತ್ತು, ಸಬ್ಸಿಡಿ, ಸಾಲಮನ್ನ ಮುಂತಾದ ಬಕ್ಷೀಸ್‌ಗಳನ್ನು ನೀಡುವ ಸರ್ಕಾರಗಳ ವಿರುದ್ಧ ಪಟ್‌ಪಿಟ್ ಎನ್ನದ ಮಾಧ್ಯಮಗಳು, ಗ್ರಾಮೀಣ ಕೂಲಿಕಾರರಿಗೆ ಉದ್ಯೋಗದ ಹಕ್ಕು ನೀಡಲು ಈ ಕಾನೂನಿಗೆ ಮೀಸಲಿಟ್ಟ ಸಣ್ಣ ಮೊತ್ತದ ಮೇಲೆಯೇ ನಿರಂತರ ತಕರಾರು ಮಾಡುತ್ತಲೇ ಬಂದವು.

ಆದರೆ ವರ್ಷಗಳು ಕಳೆದಂತೆ ಗ್ರಾಮೀಣ ಉದ್ಯೋಗ ಖಾತರಿಗಾಗಿ ಬಜೆಟ್ ಮೊತ್ತ ಹೆಚ್ಚುತ್ತಲೇ ಹೋಯಿತು. ದೇಶ ದಿವಾಳಿಯಾಗುವ ಬದಲು, ಗ್ರಾಮೀಣ ಜನಜೀವನದಲ್ಲಿ ಸ್ಪಷ್ಟ ಸುಧಾರಣೆ ಕಂಡುಬಂದಿತು. ಆಫ್ರಿಕಾದ ದೇಶಗಳೂ ಕೂಡ ಈ ಕಾನೂನಿನ ಅಧ್ಯಯನಕ್ಕಾಗಿ ಭಾರತಕ್ಕೆ ಬರತೊಡಗಿದವು.

ಕಳೆದ 20 ವರ್ಷಗಳಲ್ಲಿ ಈ ಕಾನೂನು ಕೋಟ್ಯಂತರ ಮಾನವದಿನಗಳ ಉದ್ಯೋಗ ಸೃಷ್ಟಿಸಿದೆ. ನೀರು, ಮಣ್ಣು, ಕೃಷಿ, ಅರಣ್ಯ, ಜಾನುವಾರುಗಳ ಸಂರಕ್ಷಣೆ ಹಾಗೂ ಅವುಗಳ ಅಭಿವೃದ್ಧಿಯಲ್ಲಿ ಸಾಧಿಸಿದ ಪ್ರಗತಿ ಅಪ್ಪಷ್ಟಲ್ಲ. ಮಹಾತ್ಮಾ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಕಾನೂನು, ಗ್ರಾಮೀಣ ಪ್ರದೇಶಗಳಿಂದ ನಗರಗಳತ್ತ ವಲಸೆ ಹೋಗುತ್ತಿದ್ದ ಲಕ್ಷಾಂತರ ಜನರ ಬದುಕನ್ನು ಸ್ಥಿರಗೊಳಿಸಿದೆ.

ಆದರೆ ಈ ಕಾನೂನು ಸರಿಯಾಗಿ ಅನುಷ್ಠಾನಗೊಂಡಿತೇ? ಖಂಡಿತವಾಗಿಯೂ ಇಲ್ಲ. ಅನೇಕ ಲೋಪದೋಷಗಳು ಇದ್ದವು. ಕಾನೂನು ಜಾರಿಯಾದ 45 ವರ್ಷಗಳಲ್ಲೇ ಗ್ರಾಮ ಪಂಚಾಯಿತಿ ಪದಾಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಭ್ರಷ್ಟಾಚಾರದ ಹೊಸಹೊಸ ವಿಧಾನಗಳನ್ನು ಕಂಡುಕೊಂಡರು. ಸುಳ್ಳು ದಾಖಲಾತಿಗಳನ್ನು ಸೃಷ್ಟಿಸಿ, ಕಾಂಟ್ರ್ಯಾಕ್ಟರ್‌ಗಳ ಮೂಲಕ ಯಂತ್ರಗಳನ್ನು ಬಳಸಿಕೊಂಡು ಕೆಲಸ ಮಾಡಿಸಿಕೊಂಡು ಹಣವನ್ನು ಜೇಬಿಗೆ ಹಾಕುವ ದಂಧೆಗಳು ನಡೆದಿವೆ.

ಈ ರೀತಿಯ ಭ್ರಷ್ಟಾಚಾರವನ್ನು ತಡೆಯಬೇಕೆಂದು ಮನರೇಗಾ ಕೂಲಿಕಾರರ ಸಂಘಟನೆಗಳು ಹೋರಾಟ ನಡೆಸಿವೆ. ನಮ್ಮ ಘನ ಸರ್ಕಾರಗಳು ರಾಜಕೀಯ ಬದ್ಧತೆ ತೋರಿದ್ದರೆ ಈ ಭ್ರಷ್ಟಾಚಾರವನ್ನು ತಡೆಯಲು ಸಾಧ್ಯವಿತ್ತು. ಆದರೆ ಅದನ್ನು ಮಾಡದೆ, ಈಗ ನಮ್ಮ ಒಕ್ಕೂಟದ ಮೋದಿ ಸರ್ಕಾರವು ಮನರೇಗಾವನ್ನೇ ರದ್ದುಗೊಳಿಸಿದೆ.

ಕೇವಲ ಅದರ ಹೆಸರನ್ನು ಬದಲಿಸಿ ವಿಬಿಜಿ ರಾಮ್ ಜಿ(ವಿಕಸಿತ್ ಭಾರತ ಗ್ಯಾರಂಟಿ ಫಾರ್ ರೋಜಗಾರ ಆಂಡ್ ಆಜೀವಿಕಾ ಮಿಷನ್ ಗ್ರಾಮೀಣ) ಎಂಬ ಹೆಸರಿನ ಉದ್ಯೋಗ ಯೋಜನೆಯನ್ನು ತಂದಿರುವುದಾಗಿ ಹೇಳಲಾಗುತ್ತಿದೆ. ಇದಲ್ಲದೆ, 100 ದಿನಗಳ ಬದಲಾಗಿ ವರ್ಷಕ್ಕೆ 125 ದಿನ ಉದ್ಯೋಗ ನೀಡಲಾಗುತ್ತದೆ ಎಂದು ಡಂಗುರ ಬಾರಿಸಲಾಗುತ್ತಿದೆ. ಆದರೆ ಇಲ್ಲಿ ಉದ್ಯೋಗದ ಖಾತ್ರಿ ಇಲ್ಲ.

ಯಾಕೆಂದರೆ ಮನರೇಗಾದಲ್ಲಿ ಒಕ್ಕೂಟ ಸರ್ಕಾರದ ಬಜೆಟ್‌ಗೆ ಯಾವುದೇ ಮಿತಿ ಇರಲಿಲ್ಲ. ದೇಶದ ಗ್ರಾಮೀಣ ಭಾಗದ ಯಾರೇ ಆಗಲಿ ಉದ್ಯೋಗ ಕೇಳಿದಲ್ಲಿ, 100 ದಿನಗಳವರೆಗೆ ಉದ್ಯೋಗ ಒದಗಿಸುವ ಹೊಣೆಗಾರಿಕೆ ಸರ್ಕಾರದ ಮೇಲಿತ್ತು. ಆದರೆ ರಾಮ್ ಜಿ ಯೋಜನೆಯಲ್ಲಿ ಅದು ಇಲ್ಲ. ದಿಲ್ಲಿ ಸರ್ಕಾರದ ಅಭಿವೃದ್ಧಿ ಯೋಜನೆ ಗುರುತಿಸಿದ ಪ್ರದೇಶಗಳಲ್ಲಿ, ನಿರ್ದಿಷ್ಟ ಕಾಮಗಾರಿಗಳಿಗೆ ಮಾತ್ರ ಸೀಮಿತ ಹಣಕಾಸು ವ್ಯವಸ್ಥೆ ಇದೆ.

ಅಷ್ಟೇ ಅಲ್ಲ, ಮನರೇಗಾದಲ್ಲಿ ಕೂಲಿ ಹಣವನ್ನು ಶೇ. 100ರಷ್ಟು ಒಕ್ಕೂಟ ಸರ್ಕಾರವೇ ನೀಡುತ್ತಿತ್ತು. ಈಗ ಹೊಸ ಕಾನೂನಿನಂತೆ ಒಕ್ಕೂಟ ಸರ್ಕಾರ ಕೇವಲ ಶೇ.60ರಷ್ಟು ಮಾತ್ರ ಒದಗಿಸುತ್ತದೆ; ಉಳಿದ 40ರಷ್ಟು ಹಣವನ್ನು ರಾಜ್ಯ ಸರ್ಕಾರಗಳು ನೀಡಬೇಕಾಗಿದೆ. ಜಿಎಸ್‌ಟಿ ಪಾಲು ಸರಿಯಾಗಿ ದೊರೆಯುತ್ತಿಲ್ಲವೆಂದು ರಾಜ್ಯ ಸರ್ಕಾರಗಳು ಈಗಾಗಲೇ ಬೊಬ್ಬೆ ಹೊಡೆಯುತ್ತಿರುವಾಗ, ಸಾಲದ ಭಾರದಲ್ಲಿ ಸೊರಗಿರುವ ರಾಜ್ಯ ಸರ್ಕಾರಗಳು ಈ ಶೇ.40ರಷ್ಟು ಹೊರೆ ಹೊರುವ ಸ್ಥಿತಿಯಲ್ಲಿ ಇಲ್ಲ. ಹೀಗಾಗಿ ಬಡಜನರ ಉದ್ಯೋಗದ ಹಕ್ಕನ್ನು ನಿರಾಕರಿಸುವ ಉದ್ದೇಶದಿಂದಲೇ ಈ ಹೊಸ ಕಾನೂನು ರೂಪಿಸಲಾಗಿದೆ.

ಮೋದಿ ಸರ್ಕಾರ ಉದ್ಯೋಗದ ಹಕ್ಕನ್ನು ಕೈಬಿಟ್ಟಿದ್ದು ಯಾಕೆ?

ಮನರೇಗಾ ಕಾನೂನಿನಿಂದಾಗಿ ಕೇವಲ ಉದ್ಯೋಗ ಸೃಷ್ಟಿ ಮತ್ತು ಗ್ರಾಮೀಣ ಸ್ಥಿರ ಉತ್ಪಾದಕ ಆಸ್ತಿ ನಿರ್ಮಾಣವಷ್ಟೇ ಅಲ್ಲ, ಇನ್ನೂ ಅನೇಕ ತಾತ್ವಿಕ ಅಂಶಗಳು ಕಾರ್ಯರೂಪಕ್ಕೆ ಬಂದವು.

ಮನರೇಗಾ ಕಾನೂನಿನ ಪರಿಣಾಮವಾಗಿ: ಗ್ರಾಮಸಭೆಗಳಲ್ಲಿ ಇವರೆಗೆ ಕೇವಲ 810 ಫಲಾನುಭವಿಗಳು ಮಾತ್ರ ಭಾಗವಹಿಸುತ್ತಿದ್ದ ಸ್ಥಿತಿಗೆ ಬದಲಾಗಿ, ಈಗ ನೂರಾರು ಕೂಲಿಕಾರರು, ಮಹಿಳೆಯರು, ದಲಿತರು ಹಾಗೂ ಹಿಂದುಳಿದ ವರ್ಗದ ಜನರು ಭಾಗವಹಿಸಿ ಯಾವ ಕಾಮಗಾರಿಗಳನ್ನು ಕೈಗೊಳ್ಳಬೇಕೆಂದು ತಾವೇ ನಿರ್ಧರಿಸಲು ಆರಂಭಿಸಿದರು.

ಚಿಕ್ಕ ಹಿಡುವಳಿದಾರರ ಸ್ವಂತ ಭೂಮಿಯಲ್ಲಿ ಕೃಷಿ ಹೊಂಡ, ಭೂಮಿ ಸಮತಲೀಕರಣ ಮುಂತಾದ ಕೆಲಸಗಳು ನಡೆದಿದ್ದು, ಬಡ ರೈತರ ಉತ್ಪಾದಕತೆ ಹೆಚ್ಚಳ ಕಂಡಿತು. ಕೃಷಿ ಕಾರ್ಮಿಕರು ಸಂಘಟಿತರಾಗುವ ಅವಕಾಶ ದೊರಕಿತು(ಕರ್ನಾಟಕದಲ್ಲಿ ಗ್ರಾಮೀಣ ಕೂಲಿ ಕಾರ್ಮಿಕರ ಸಂಘಟನೆಗಳಾದ ಗ್ರಾಕೂಸ್ ಮೊದಲಾದವುಗಳು ಲಕ್ಷಾಂತರ ಕೂಲಿಕಾರರನ್ನು ಸಂಘಟಿಸಿದ್ದು ಐತಿಹಾಸಿಕ ಬೆಳವಣಿಗೆಯಾಗಿದೆ).

ಪಂಚಾಯತ್ ಮಟ್ಟದ ನಿರ್ಧಾರ ಪ್ರಕ್ರಿಯೆಗಳಲ್ಲಿ ಕೂಲಿಕಾರರು, ಮಹಿಳೆಯರು, ದಲಿತರು ಹಾಗೂ ಹಿಂದುಳಿದ ವರ್ಗಗಳ ಸಹಭಾಗಿತ್ವ ಗಮನಾರ್ಹವಾಗಿ ಹೆಚ್ಚಿತು. ಮೊದಲ ಬಾರಿಗೆ ಗ್ರಾಮೀಣ ಪ್ರದೇಶಗಳಲ್ಲಿ ಸರ್ಕಾರ ದೊಡ್ಡ ಪ್ರಮಾಣದಲ್ಲಿ ಬಂಡವಾಳ ಹೂಡಿಕೆಯನ್ನು ಮಾಡಿತು.

ಈ ಎಲ್ಲ ಬೆಳವಣಿಗೆಗಳು ಮಹಾತ್ಮ ಗಾಂಧೀಜಿಯವರ ಗ್ರಾಮಸ್ವರಾಜ್ಯದ ಕಲ್ಪನೆಯೊಂದಿಗೆ ಹೊಂದಿಕೆಯಾಗುತ್ತವೆ. ಗಾಂಧೀಜಿ ಅಂತ್ಯೋದಯದಿಂದ ಸರ್ವೋದಯದ ಆರಂಭವಾಗಬೇಕು ಎಂದು ಹೇಳಿದ್ದರು. ಉದ್ಯೋಗ ಖಾತ್ರಿ ಯೋಜನೆ ಈ ಎರಡೂ ತಾತ್ವಿಕ ಅಂಶಗಳನ್ನು ಒಳಗೊಂಡಿತ್ತು.

ದೇಶದ ಎಲ್ಲ ಪ್ರಕೃತಿ ಸಂಪತ್ತನ್ನು ಬಂಡವಾಳಶಾಹಿಗಳಿಗೆ ಧಾರೆ ಎರೆಯುತ್ತಿರುವ ಮೋದಿ ಸರ್ಕಾರಕ್ಕೆ ಈ ರೀತಿಯ ಜನಪರ ಬೆಳವಣಿಗೆಗಳು ಹೇಗೆ ರುಚಿಸಬೇಕು? ಅದಾನಿ, ಅಂಬಾನಿ ಮೊದಲಾದ ಬಂಡವಾಳಶಾಹಿಗಳ ನಿರಂತರ ಒತ್ತಡದ ಪರಿಣಾಮವಾಗಿ, ಈ ಕಾನೂನನ್ನು ರದ್ದುಪಡಿಸುವ ಸಂಚು ನಡೆದಿರುವುದು ಸ್ಪಷ್ಟ. ಸರ್ಕಾರ ತನ್ನ ಸ್ವಾಭಾವಿಕ ಕಾರ್ಯಪದ್ಧತಿಯಾದ ಮೋಸಗಾರಿಕೆಯನ್ನು ಅಳವಡಿಸಿಕೊಂಡು, 100 ದಿನಗಳ ಉದ್ಯೋಗವನ್ನು 125 ದಿನಗಳಿಗೆ ವಿಸ್ತರಿಸುವುದಾಗಿ ಹಾಗೂ ಪಾರದರ್ಶಕ ಆಡಳಿತಕ್ಕಾಗಿ ವಿಬಿ ಜಿ ರಾಮ್ ಜಿ ಕಾನೂನು ತರುವುದಾಗಿ ಹೇಳಿ, ಮೊದಲಿನ ಉದ್ಯೋಗ ಖಾತ್ರಿ ಕಾನೂನನ್ನೇ ರದ್ದುಗೊಳಿಸಿದೆ. ಇದರ ಪರಿಣಾಮವಾಗಿ ಉದ್ಯೋಗ ಮುಂದಿನ ದಿನಗಳಲ್ಲಿ ರಾಮಭರೋಸೆ ಆಗಲಿದೆ.

ಕಾರ್ಪೊರೇಟ್ ಲಾಭಕ್ಕೆ ಅನುಕೂಲ ಒದಗಿಸಲು ಸರ್ಕಾರ ರೈತ ವಿರೋಧಿ ಮೂರು ಕೃಷಿ ಕಾನೂನುಗಳನ್ನು ಜಾರಿಗೆ ತಂದಾಗ, ರೈತರು ದಿಲ್ಲಿಯ ಅಂಗಳದಲ್ಲಿ ಸುದೀರ್ಘ ಹೋರಾಟ ನಡೆಸಿ, 600ಕ್ಕೂ ಹೆಚ್ಚು ಹುತಾತ್ಮರ ಬಲಿದಾನದೊಂದಿಗೆ ಆ ಕಾನೂನುಗಳನ್ನು ರದ್ದುಗೊಳಿಸುವಲ್ಲಿ ಯಶಸ್ವಿಯಾದರು. ಅದೇ ರೀತಿಯಲ್ಲಿ ಗ್ರಾಮೀಣ ಕೂಲಿಕಾರರೂ ಕೂಡ ಸಂಘಟಿತರಾಗಿ, ಒಗ್ಗಟ್ಟು ತೋರಿಸಿ ತಮ್ಮ ಉದ್ಯೋಗದ ಹಕ್ಕನ್ನು ಕಾಪಾಡಿಕೊಳ್ಳಬೇಕಿದೆ.

ಮೋದಿ ಸರ್ಕಾರಕ್ಕೆ ಪ್ರೀತಿ ಇರುವುದು ಕೇಂದ್ರಿತ ವ್ಯವಸ್ಥೆಗೆ, ಕಾರ್ಪೋರೇಟ್ ಹಿತರಕ್ಷಣೆಗೆ, ವರ್ಣಾಶ್ರಮ ಆಧಾರಿತ ಹಿಂದುತ್ವಕ್ಕೆ ಹಾಗೂ ಸ್ವದೇಶಿಯ ಹೆಸರಿನಲ್ಲಿ ಬಹುರಾಷ್ಟ್ರೀಯ ಕಂಪನಿಗಳ ಅಭಿವೃದ್ಧಿಗೆ. ಇಂತಹ ಪರಿಸ್ಥಿತಿಯಲ್ಲಿ ದುಡಿಯುವ ವರ್ಗ, ಮಹಿಳೆಯರು, ದಲಿತರು ಜಾಗೃತರಾಗಿ ಸಂಘಟಿತರಾಗಿ ತಮ್ಮ ಹಕ್ಕುಗಳಿಗಾಗಿ, ನೈಸರ್ಗಿಕ ಸಂಪನ್ಮೂಲಗಳ ರಕ್ಷಣೆಗಾಗಿ ಹಾಗೂ ನಿಜವಾದ ಜನತಂತ್ರದ ಅನುಷ್ಠಾನಕ್ಕಾಗಿ ಮುನ್ನಡೆಯುವುದಾದರೆ ಬಂಡವಾಳವಾಹಿಗಳ ಹಿತರಕ್ಷಣೆ ಹೇಗೆ ಸಾಧ್ಯ?

ಮನರೇಗಾದಿಂದ ಬೃಹತ್ ಬಂಡವಾಳವಾಹಿಗಳ ಹಿತರಕ್ಷಣೆ ಸಾಧ್ಯವಾಗುತ್ತಿಲ್ಲ. ಇದು ಬಡವರ ಹಕ್ಕಾಗಿರುವುದರಿಂದ ಉದ್ಯಮಿಗಳ ಪಾಲು ಮಾಡಲಾಗುವುದಿಲ್ಲ. ಏಕೆಂದರೆ ಈ ಕಾನೂನು ರಾಜ್ಯಗಳ ಹಿಡಿತದಲ್ಲಿದೆ. ಅದಕ್ಕಾಗಿಯೇ ಕೇಂದ್ರ ಗಾಂಧಿ ಹೆಸರಿನ ಉದ್ಯೋಗ ಖಾತ್ರಿ ಕಾನೂನನ್ನು ತೆಗೆದು ಹಾಕಿ, ಇದನ್ನು ರಾಮನ ಹೆಸರಿನಲ್ಲಿ ತನ್ನ ತೆಕ್ಕೆಗೆ ತೆದುಕೊಂಡು ಬಡವರ ಮೂಗಿಗೆ ತುಪ್ಪ ಹಚ್ಚುವ ಸುಳ್ಳು ಉದ್ಯೋಗ ಭರವಸೆಯ ಕಾನೂನನ್ನು ಜಾರಿಗೆ ತಂದು, ಗ್ರಾಮೀಣ ಕೂಲಿಕಾರರನ್ನು ಮೋಸಗೊಳಿಸುವ ಕುತಂತ್ರಕ್ಕೆ ಈ ಸರ್ಕಾರ ಕೈ ಹಾಕಿದೆ. ಈ ಮೂಲಕ ಬಂಡವಾಳಿಗರನ್ನು ಗ್ರಾಮ ಪಂಚಾಯತ್‌ಗಳಿಗೂ ತುರುಕುವ ಹುನ್ನಾರ ನಡೆಯುತ್ತಿದೆ.

ನಿರುದ್ಯೋಗ ಹೆಚ್ಚಳ: ಯುವಕರ ನಂಬಿಕೆಗೆ ದ್ರೋಹ



ಪ್ರಧಾನಿ ಮೋದಿ ನೇತೃತ್ವದ ಮೂರು ಅವಧಿಯ ಎನ್‌ಡಿಎ ಸರ್ಕಾರವು ಭಾರತದಲ್ಲಿ ಉದ್ಯೋಗ ಸೃಷ್ಟಿಯಲ್ಲಿ ಕಳಪೆ ಸಾಧನೆ ಮಾಡಿದೆ. ಮಾತ್ರವಲ್ಲ, ಸಾಕಷ್ಟು ಉದ್ಯೋಗ ನಷ್ಟಕ್ಕೂ ಕಾರಣವಾಗಿದೆ. ಆದರೆ, ಉದ್ಯೋಗ ಕ್ಷೇತ್ರವನ್ನು ಬಲಪಡಿಸುವಲ್ಲಿ ಮೋದಿ ಸರ್ಕಾರ ವಿಫಲವಾಗಿದೆ.

2014ರಲ್ಲಿ ನಿರುದ್ಯೋಗ ವಿಚಾರವನ್ನ ಮುನ್ನೆಲೆಗೆ ತಂದು ನಾವೇನಾದರೂ ಅಧಿಕಾರಕ್ಕೆ ಬಂದರೆ ವರ್ಷಕ್ಕೆ 2 ಕೋಟಿ ಉದ್ಯೋಗ ಸೃಷ್ಟಿ ಮಾಡುವುದಾಗಿ ಪ್ರಧಾನಿ ನರೇಂದ್ರ ಮೋದಿ ಅವರು ಪ್ರತಿಜ್ಞೆ ಮಾಡಿದ್ದರು. ಮೋದಿ ಪ್ರತಿಜ್ಞೆ ಮಾಡಿದಂತೆ ನಡೆದುಕೊಂಡಿದ್ದರೇ, ಈಗಾಗಲೇ 22 ಕೋಟಿಗೂ ಅಧಿಕ ಉದ್ಯೋಗ ಸೃಷ್ಟಿ ಮಾಡಬೇಕಿತ್ತು. ಆದರೆ, ಹಾಗೇ ಆಗಿಲ್ಲ. ಹೆಚ್ಚಿನ ಜನರು ಉದ್ಯೋಗಕ್ಕೆ ಪ್ರವೇಶ ಮಾಡುತ್ತಿದ್ದಾರೆ ಎಂದು ಸರ್ಕಾರ ಹೇಳಿಕೊಂಡರೂ, ಅನೇಕ ಕಾರ್ಮಿಕರು ಕಡಿಮೆ ಸಂಬಳ, ಅಸುರಕ್ಷಿತ ಕೆಲಸದಲ್ಲಿ ತೊಡಗಿಸಿಕೊಂಡಿದ್ದಾರೆ ಎಂಬುದು ವಾಸ್ತವ. ಜಿಡಿಪಿ ಏರಿಕೆಯಾಗಿ ಭಾರತ ವಿಶ್ವದ ನಾಲ್ಕನೇ ಅತಿದೊಡ್ಡ ಆರ್ಥಿಕತೆಯಾದಾಗಲೂ, ಇದು ಉದ್ಯೋಗ ಸ್ವರೂಪದಲ್ಲಿ ಯಾವುದೇ ಸುಧಾರಣೆಗೆ ಕಾರಣವಾಗಿಲ್ಲ.

ಆದಾಗ್ಯೂ, ಭಾರತವು ಉದ್ಯೋಗ ಸೃಷ್ಟಿಯಲ್ಲಿ ಮುಮ್ಮುಖವಾಗಿ ಬೆಳೆಯುತ್ತಿಲ್ಲ. ಬದಲಾಗಿ, ಹಿಮ್ಮುಖ ಚಲನೆಯಲ್ಲಿದೆ. ಪ್ರಸ್ತುತ ಸಂದರ್ಭದಲ್ಲಿ, ಕಾರ್ಮಿಕರು ಕೃಷಿ ಕ್ಷೇತ್ರದಿಂದ ಉತ್ಪಾದನೆ ಮತ್ತು ಸೇವಾ ವಲಯದೆಡೆ ಹೆಚ್ಚು ಬದಲಾವಣೆ ಕಾಣಬೇಕಿತ್ತು. ಆದರೆ, ಕೋವಿಡ್ ನಂತರದ ಅವಧಿಯಲ್ಲಿ, ಉತ್ಪಾದನಾ ವಲಯದಲ್ಲಿದ್ದ ಕಾರ್ಮಿಕರೇ ಕೃಷಿಯೆಡೆಗೆ ವಾಲುತ್ತಿದ್ದಾರೆ. ಉತ್ಪಾದನಾ ವಲಯವು ಅನೌಪಚಾರಿಕ ಮತ್ತು ಅನಿಶ್ಚಿತ ಉದ್ಯೋಗದ ಬೆಳವಣಿಗೆಯಿಂದ ಕೂಡಿದೆ. ಇಂತಹ ಪರಿಸ್ಥಿತಿಯಲ್ಲಿ, ಉತ್ಪಾದನಾ ವಲಯಗಳಲ್ಲಿ ಉದ್ಯೋಗವನ್ನು ಹೆಚ್ಚಿಸುತ್ತೇವೆಂದು ಹೇಳುತ್ತಿದ್ದ ಸರ್ಕಾರವು ನಿಜವಾಗಿಯೂ ಯಶಸ್ವಿಯಾಗಿದೆಯೇ?

ಉದ್ಯೋಗ ಸೃಷ್ಟಿಸುವಲ್ಲಿ ವಿಫಲತೆ

2014ರಲ್ಲಿ ಅಧಿಕಾರಕ್ಕೆ ಬಂದ ಮೋದಿ ಸರ್ಕಾರ, ಮೇಕ್ ಇನ್ ಇಂಡಿಯಾ ಯೋಜನೆಯನ್ನು ಆರಂಭಿಸಿತು. ಈ ಯೋಜನೆಯು ಉತ್ಪಾದನಾ ವಲಯವನ್ನು ಉತ್ತೇಜಿಸುತ್ತದೆ ಮತ್ತು ಉದ್ಯೋಗ ಸೃಷ್ಟಿಗೆ ನೆರವಾಗುತ್ತದೆ. 10 ಕೋಟಿ ಉದ್ಯೋಗ ಸೃಷ್ಟಿ ಮಾಡುವ ಗುರಿ ಹಾಕಿಕೊಳ್ಳಲಾಗಿದೆ ಎಂದು ಸರ್ಕಾರ ಹೇಳಿಕೊಂಡಿತ್ತು. ಆದರೆ, ಈ ಯೋಜನೆಯು 2023ರ ಹೊತ್ತಿಗೆ 10ನೇ ವರ್ಷಕ್ಕೆ ಕಾಲಿಟ್ಟಾಗ ತನ್ನ ಗುರಿಯನ್ನು ಸಾಧಿಸಿರಲಿಲ್ಲ. ಈ 10 ವರ್ಷಗಳಲ್ಲಿ ಕೇವಲ 1.85 ಕೋಟಿ ಉದ್ಯೋಗಗಳು ಮಾತ್ರವೇ ಸೃಷ್ಟಿಯಾಗಿವೆ ಎಂದು ಸರ್ಕಾರವೇ ಲೋಕಸಭೆಯಲ್ಲಿ ಹೇಳಿಕೊಂಡಿದೆ.

ಕೋವಿಡ್ ನಂತರ 2020ರ ನವೆಂಬರ್‌ನಲ್ಲಿ, ದೇಶದ ಉತ್ಪಾದನಾ ಸಾಮರ್ಥ್ಯಗಳನ್ನು ಹೆಚ್ಚಿಸಲು ಮೋದಿ ಸರ್ಕಾರವು ಉತ್ಪಾದನಾ ಪ್ರೋತ್ಸಾಹಕ ಯೋಜನೆಯನ್ನು ಘೋಷಿಸಿತು. ಅದಕ್ಕಾಗಿ, ಒಟ್ಟು 1.97ಲಕ್ಷ ಕೋಟಿ ರೂ.ಗಳನ್ನು ಮೀಸಲಿಟ್ಟಿತು. ಆದರೆ, ಕೆಲವು ವಲಯಗಳಲ್ಲಿ ಉತ್ಪಾದನಾ ಗುರಿಗಳಲ್ಲಿ 37% ಗುರಿಯನ್ನು ಸಾಧಿಸಿದರೂ, ಗಣನೀಯ ಯಶಸ್ಸು ಕಾಣಲಿಲ್ಲ. ಪರಿಣಾಮ, ಈ ಯೋಜನೆ 2025ರ ಆರಂಭದಲ್ಲಿ ರದ್ದಾಗಿತ್ತು.

ಉತ್ಪಾದನೆಯಲ್ಲಿನ ನಿಶ್ಚಲತೆಯೂ ಉದ್ಯೋಗದ ಮೇಲೆ ಪರಿಣಾಮ ಬೀರಿದೆ. 2011-12ರಲ್ಲಿ ಒಟ್ಟು ಉದ್ಯೋಗಗಳ ಪೈಕಿ ಉತ್ಪಾದನಾ ವಲಯವು 12.6%ರಷ್ಟು ಉದ್ಯೋಗ ಪಾಲನ್ನು ಹೊಂದಿತ್ತು. ಆ ನಂತರ, ಉತ್ಪಾದನಾ ವಲಯದಲ್ಲಿ ಉದ್ಯೋಗಗಳ ಸ್ಥಿರವಾದ ಕುಸಿತ ಕಂಡುಬಂದಿದೆ.

ಸಂಕಷ್ಟದಲ್ಲಿರುವ ಗಳು, ಉದ್ಯೋಗ ಕುಸಿತ

ಸರ್ಕಾರದ ಉದ್ಯೋಗ ಕಾರ್ಯಸೂಚಿಯ ಬಹುಪಾಲು ಭಾಗವು ವಲಯದ ಮೇಲೆ ನಿಂತಿದೆ. ಗಳು ಆರ್ಥಿಕತೆಯ ಬೆಳವಣಿಗೆ ಮತ್ತು ಉದ್ಯೋಗಗಳ ಎಂಜಿನ್ ಎಂಬ ನಿರೂಪಣೆಯ ಹೊರತಾಗಿಯೂ, ಭಾರತದ ಒಟ್ಟು ಮೌಲ್ಯವರ್ಧನೆಯಲ್ಲಿ ಗಳ ಪಾಲು 2014 ರಿಂದ ಸುಮಾರು 29.6% ರಷ್ಟಿದೆ. ಆದಾಗ್ಯೂ, ನೋಟು ರದ್ದತಿ ಮತ್ತು ಅನುಷ್ಠಾನದಂತಹ ನೀತಿ-ನಿರ್ಧಾರಗಳು ಮತ್ತು ಕೋವಿಡ್ ಸಾಂಕ್ರಾಮಿಕ ಹಾಗೂ ಅಮೆರಿಕದ ಸುಂಕ ಹೇರಿಕೆಗಳಿಂದ ಎಂಎಸ್‌ಎಂಇ ವಲಯವು ತೀವ್ರ ಆರ್ಥಿಕ ಆಘಾತಕ್ಕೆ ಸಿಲುಕಿದೆ. ಗಳು ಗಂಭೀರವಾಗಿ ಹಾನಿಗೊಳಗಾಗಿವೆ. ಪರಿಣಾಮ, ಎಂಎಸ್‌ಎಂಇಗಳು ಮುಚ್ಚುತ್ತಿವೆ ಮತ್ತು ಉದ್ಯೋಗ ನಷ್ಟವೂ ಹೆಚ್ಚಾಗಿದೆ. 2021-22 ಮತ್ತು 2024-25ರ ನಡುವೆ, ಸುಮಾರು 79,000 ಗಳು ಮುಚ್ಚಲ್ಪಟ್ಟಿವೆ. ಗಳ ಮುಚ್ಚುವಿಕೆಯ ಸಂಖ್ಯೆಯು ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿದೆ.

ಎಂಎಸ್‌ಎಂಇಗಳನ್ನು ಗಟ್ಟಿಗೊಳಿಸಲು ಇರುವ ಏಕೈಕ ಮಾರ್ಗ, ಸಾಲದ ಲಭ್ಯತೆ. ಆದರೆ, ಸಾಲ ಸೌಲಭ್ಯಗಳಲ್ಲಿಯೂ ಸಮಸ್ಯೆಗಳಿವೆ. ಎಂಎಸ್‌ಎಂಇಗೆ ಸಾಲ ಒದಗಿಸಬಹುದಾದ, ಪ್ರಧಾನ ಮಂತ್ರಿ ಉದ್ಯೋಗ ಸೃಷ್ಟಿ ಕಾರ್ಯಕ್ರಮಕ್ಕೆ 2019-20 ರಿಂದ ಬಜೆಟ್ ಹಂಚಿಕೆಗಳು ಕುಸಿಯುತ್ತವೇ ಬಂದಿವೆ. ಪರಿಣಾಮ, ಯೋಜನೆಯ ಮೂಲಕ ಸಹಾಯ ಪಡೆದ ಉದ್ಯಮಗಳು ಮತ್ತು ಉದ್ಯೋಗ ಸೃಷ್ಟಿಯ ಸಂಖ್ಯೆ ತೀವ್ರವಾಗಿ ಕುಸಿದಿವೆ.

ಉದ್ಯಮಶೀಲತೆಯನ್ನು ಉತ್ತೇಜಿಸುವ ಸರ್ಕಾರದ ಪ್ರಮುಖ ಯೋಜನೆಯಾದ ಪ್ರಧಾನ ಮಂತ್ರಿ ಮುದ್ರಾ ಯೋಜನೆ () ಪ್ರಕಾರ, 2020-21ನೇ ಹಣಕಾಸು ವರ್ಷದಿಂದ 2024-25ನೇ ಹಣಕಾಸು ವರ್ಷದ ಅಂತ್ಯದವರೆಗೆ ಹೆಚ್ಚಿನ ಸಾಲ ಖಾತೆಗಳು 50,000 ರೂ.ಗಿಂತ ಕಡಿಮೆ ಸಾಲದ ಗಾತ್ರವನ್ನು ಹೊಂದಿವೆ. ಈ ಅವಧಿಯಲ್ಲಿ ಸರಿಸುಮಾರು 28.83 ಕೋಟಿ ಸಾಲ ಖಾತೆಗಳಲ್ಲಿ, ಸುಮಾರು 67% ಖಾತೆಗಳು ಕಡಿಮೆ ಮೊತ್ತದ ಸಾಲ ಪಡೆದಿವೆ. ಈ ಕಡಿಮೆ ಮೊತ್ತದ ಸಾಲಗಳ ಹೆಚ್ಚಿನ ಪ್ರಮಾಣವು ಉದ್ಯಮಗಳ ದೀರ್ಘಕಾಲೀನ ಪೋಷಣೆಯನ್ನು ಸರಿಯಾದ ರೀತಿಯಲ್ಲಿ ಬೆಂಬಲಿಸಿಲ್ಲ.

ಕೃಷಿ ಮತ್ತು ಗ್ರಾಮೀಣ ಆರ್ಥಿಕತೆಯ ಕಡೆಗಣನೆ

2023-24ರ ಪಿಎಲ್‌ಎಫ್‌ಎಸ್ ಪ್ರಕಾರ, ಭಾರತದ ಜನಸಂಖ್ಯೆಯ 46.1% ಜನರು ಇನ್ನೂ ಜೀವನೋಪಾಯಕ್ಕಾಗಿ ಕೃಷಿ ಮತ್ತು ಕೃಷಿ ಸಂಬಂಧಿತ ಚಟುವಟಿಕೆಗಳನ್ನು ಅವಲಂಬಿಸಿದ್ದಾರೆ. ಅವರೆಲ್ಲರೂ, ಜಿಡಿಪಿಯಲ್ಲಿ 16% ಕೊಡುಗೆ ನೀಡುತ್ತಿದ್ದಾರೆ. ಇದು ಹೆಚ್ಚು ಕಾರ್ಮಿಕರು ಅತೀ ಕಡಿಮೆ ಆದಾಯ ಮತ್ತು ಕಡಿಮೆ ಉತ್ಪಾದಕತೆಯ ಉದ್ಯೋಗಗಳಲ್ಲಿ ತೊಡಗಿದ್ದಾರೆ ಎಂಬುದನ್ನು ಒತ್ತಿಹೇಳುತ್ತದೆ.

ಇದೇ ಸಮಯದಲ್ಲಿ, ಗ್ರಾಮೀಣ ಉದ್ಯೋಗ ಸೃಷ್ಟಿಗೆ ಪ್ರಮುಖ ಯೋಜನೆಯಾದ ಮನರೇಗಾ ಅಡಿಯಲ್ಲಿಯೂ ಕೂಡ ಕೇಂದ್ರ ಸರ್ಕಾರವು, ಕೆಲಸದ ಬೇಡಿಕೆಗೆ ತಕ್ಕಷ್ಟು ಉದ್ಯೋಗಗಳನ್ನು ಸೃಷ್ಟಿಸುತ್ತಿಲ್ಲ. ಮನರೇಗಾ ಯೋಜನೆಯು ಸತತ ಬಜೆಟ್ ಕಡಿತ ಮತ್ತು ದೀರ್ಘಕಾಲದ ಹಣದ ಕೊರತೆಯನ್ನು ಎದುರಿಸುತ್ತಿದೆ. ಪ್ರತಿ ವರ್ಷ ಹಂಚಿಕೆಯಾಗುವ ಬಜೆಟ್‌ನಲ್ಲಿ, ಸುಮಾರು 20%ರಷ್ಟು ಹಣವನ್ನು ಹಿಂದಿನ ವರ್ಷದ ಬಾಕಿ ಪಾವತಿಸಲು ಬಳಸಲಾಗುತ್ತದೆ. ಇದು ಉದ್ಯೋಗ ಸೃಷ್ಟಿಗೆ ಸಾಕಷ್ಟು ಕಡಿತ ಮಾಡಿದೆ.

2023ರಲ್ಲಿ ಮನರೇಗಾ ಸಂಘರ್ಷ ಮೋರ್ಚಾ ಹೇಳುವಂತೆ, ನೋಂದಾಯಿತ ಕುಟುಂಬಗಳಿಗೆ 100 ದಿನಗಳ ಉದ್ಯೋಗವನ್ನು ಪೂರೈಸಲು ಮನರೇಗಾಗಿನ ಬಜೆಟ್ ಅನ್ನು 2 ಲಕ್ಷ ಕೋಟಿ ರೂ.ಗಳಿಗೆ ಹೆಚ್ಚಿಸುವ ಅಗತ್ಯವಿದೆ. ಆದರೆ, ಕೇಂದ್ರ ಸರ್ಕಾರವು ಮನರೇಗಾವನ್ನೇ ಬುಡಮೇಲು ಮಾಡಿ, ಹೊಸದಾಗಿ ಕಾಯ್ದೆಯನ್ನು ಜಾರಿಗೊಳಿಸಲು ಮುಂದಾಗಿದೆ. ಇದು ರಾಜ್ಯಗಳ ಮೇಲೆ ಹಣಕಾಸಿನ ಹೊರೆಯನ್ನು ಹೇರುತ್ತದೆ. ಜೊತೆಗೆ, ಗ್ರಾಮೀಣ ಉದ್ಯೋಗ ಸೃಷ್ಟಿಯನ್ನು ಮತ್ತಷ್ಟು ನಿರ್ಬಂಧಿಸುತ್ತದೆ.

ಭಾರತವು ಉದ್ಯೋಗ ಮತ್ತು ಉದ್ಯೋಗ ಗುಣಮಟ್ಟದ ಬಿಕ್ಕಟ್ಟನ್ನು ಎದುರಿಸುತ್ತಿದೆ. ವಿಶೇಷವಾಗಿ, ಕೋವಿಡ್ ನಂತರದ ಅವಧಿಯಲ್ಲಿ ಗಿಗ್, ಅನೌಪಚಾರಿಕ ಹಾಗೂ ಅಸಂಘಟಿತ ವಲಯದ ಕೆಲಸಗಳು ಹೆಚ್ಚುತ್ತಿವೆ. ಇದು, ಉದ್ಯೋಗ ಹೆಚ್ಚುತ್ತಿದೆ ಎಂಬುದನ್ನು ಸೂಚಿಸಬಹುದು. ಆದರೆ, ಯಾವ ರೀತಿಯ ಉದ್ಯೋಗವನ್ನು ಸೃಷ್ಟಿಸಲಾಗುತ್ತಿದೆ ಎಂಬುದು ಗಮನಾರ್ಹ ಪ್ರಶ್ನೆಯಾಗಿದೆ. ಈ ಅನೌಪಚಾರಿಕ ಉದ್ಯೋಗಗಳು ಅನಿಶ್ಚಿತವಾಗಿವೆ. ಇಪಿಎಫ್ ರೀತಿಯ ಸೌಲಭ್ಯಗಳಿಂದ ಹೊರಗುಳಿಯುತ್ತವೆ. ಜನವರಿ 29ರಂದು ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಮಂಡಿಸಿದ ಆರ್ಥಿಕ ಸಮೀಕ್ಷೆ ಪ್ರಕಾರ, ಬಹುತೇಕ ಗಿಗ್ ಕಾರ್ಮಿಕರು ಮಾಸಿಕ 15,000ಕ್ಕಿಂತ ಕಡಿಮೆ ಆದಾಯ ಪಡೆಯುತ್ತಿದ್ದಾರೆ.

ಇದೆಲ್ಲವೂ, ಪ್ರಧಾನಿ ಮೋದಿ ನೇತೃತ್ವದ ಮೂರು ಅವಧಿಯ ಎನ್‌ಡಿಎ ಸರ್ಕಾರವು ಭಾರತದಲ್ಲಿ ಉದ್ಯೋಗ ಸೃಷ್ಟಿಯಲ್ಲಿ ಕಳಪೆ ಸಾಧನೆ ಮಾಡಿದೆ. ಮಾತ್ರವಲ್ಲ, ಸಾಕಷ್ಟು ಉದ್ಯೋಗ ನಷ್ಟಕ್ಕೂ ಕಾರಣವಾಗಿದೆ. ಆದರೆ, ಉದ್ಯೋಗ ಕ್ಷೇತ್ರವನ್ನು ಬಲಪಡಿಸುವಲ್ಲಿ ಮೋದಿ ಸರ್ಕಾರ ವಿಫಲವಾಗಿದೆ ಎಂಬುದನ್ನು ಸ್ಪಷ್ಟವಾಗಿ ಸೂಚಿಸುತ್ತದೆ.

ಚಿನ್ನದ ಅಸಾಮಾನ್ಯ ಬೆಲೆ ಏರಿಕೆ; ಇದು ದರ ಇಳಿಕೆಯ ಸೂಚನೆಯೇ?

2026ರ ಜನವರಿ 29-30ರ ಹೊತ್ತಿಗೆ, ಅಮೆರಿಕದ ನ್ಯೂಯಾರ್ಕ್ ಮಾರುಕಟ್ಟೆಯಲ್ಲಿ ಚಿನ್ನ ಮತ್ತು ಬೆಳ್ಳಿಯ ಬೆಲೆಗಳು ಭಾರೀ ಇಳಿಕೆ ಕಂಡಿವೆ, ಆದರೆ ಅದೇ ಸಮಯದಲ್ಲಿ ಚೀನಾ, ಭಾರತ ಸೇರಿದಂತೆ ಇತರೆ ಕೆಲವು ಮಾರುಕಟ್ಟೆಗಳಲ್ಲಿ ಬೆಲೆಗಳು ಗಗನಕ್ಕೇರಿವೆ. ಈ ವ್ಯತ್ಯಾಸ ಸಹಜವಾಗಿಯೇ ಆಗಾಗ ಮುಗಿಯಬೇಕು. ಆದರೆ ಅದಾಗುತ್ತಿಲ್ಲ. ಅಂದರೆ, ಕಡಿಮೆ ಬೆಲೆ ಇರುವ ಅಮೆರಿಕದಿಂದ ಚಿನ್ನ-ಬೆಳ್ಳಿ ಖರೀದಿ ಮಾಡಿ, ಹೆಚ್ಚು ಬೆಲೆ ಇರುವ ಚೀನಾಕ್ಕೆ ಕಳುಹಿಸುವ ಪ್ರಕ್ರಿಯೆ ನಡೆಯುತ್ತಿಲ್ಲ.

ಸದ್ಯ ಜಗತ್ತಿನ ಸರಕು ಮಾರುಕಟ್ಟೆಗಳಲ್ಲಿ, ವಿಶೇಷವಾಗಿ ಚಿನ್ನ ಮತ್ತು ಬೆಳ್ಳಿಯ ವಿಷಯದಲ್ಲೊಂದು ಅಸಾಮಾನ್ಯ ಪರಿಸ್ಥಿತಿ ನಿರ್ಮಾಣವಾಗಿರುವುದು ಗೊತ್ತೇ ಇದೆ. ಭಾರತವೂ ಸೇರಿದಂತೆ ವಿಶ್ವದಾದ್ಯಂತ 2026ರಲ್ಲಿಯೂ ಬಂಗಾರದ ಮಾರುಕಟ್ಟೆ ಮತ್ತೊಮ್ಮೆ ಚರ್ಚೆಯ ಕೇಂದ್ರಬಿಂದುವಾಗಿದೆ. ಗ್ರಾಹಕರಿಂದ ಹೂಡಿಕೆದಾರರವರೆಗೆ ಎಲ್ಲರ ನೋಟವೂ ಈಗ ಚಿನ್ನ ಬೆಳ್ಳಿಯತ್ತ ತಿರುಗಿದೆ.

ಕಳೆದ ಎರಡು ದಶಕಗಳಲ್ಲಿ ವಿಶ್ವ ಆರ್ಥಿಕತೆಯ ಅಸ್ಥಿರತೆ, ಜಿಯೋಪಾಲಿಟಿಕಲ್ ಸಂಘರ್ಷಗಳು ಮತ್ತು ಮಾರುಕಟ್ಟೆಯ ಏರಿಳಿತದ ಭಯದ ನಡುವೆಯೂ ಹಳದಿ ಮತ್ತು ಬಿಳಿ ಲೋಹಗಳು ತಮ್ಮ ಹೊಳಪು ಕಾಪಾಡಿಕೊಂಡಿವೆ. 2026ರಲ್ಲಿ ಚಿನ್ನದ ಬೆಲೆಯಲ್ಲಿ ಸಾರ್ವಕಾಲಿಕ ಏರಿಕೆ ಕಂಡಿದೆ. ಅಷ್ಟಕ್ಕೂ ಚಿನ್ನದ ಬೆಲೆ ಏರಿಳಿತಕ್ಕೆ ಕಾರಣವೇನು? ಇನ್ನು ಎಷ್ಟರವರೆಗೆ ಬೆಲೆ ಏರಿಕೆಯಾಗಬಹುದು? ಹೂಡಿಕೆದಾರರ ಮುಂದಿನ ನಡೆಯೇನು? ಈ ಅಸಾಮಾನ್ಯ ಏರಿಕೆ ಮುಂದಿನ ದಿನಗಳಲ್ಲಿ ಇಳಿಕೆಯಾಗುವ ಮುನ್ಸೂಚನೆಯೇ?

ಸಾಮಾನ್ಯವಾಗಿ ಜಾಗತಿಕ ಮಾರುಕಟ್ಟೆಗಳು ಸರಿಯಾಗಿ ಕೆಲಸ ಮಾಡುತ್ತಿದ್ದರೆ, ಒಂದೇ ಸರಕಿಗೆ ವಿಭಿನ್ನ ದೇಶಗಳಲ್ಲಿ ಭಾರಿ ಬೆಲೆ ವ್ಯತ್ಯಾಸ ಇರುವುದಿಲ್ಲ. ಎಲ್ಲಿಯಾದರೂ ಬೆಲೆ ಕಡಿಮೆ ಇದ್ದರೆ, ವ್ಯಾಪಾರಿಗಳು ಅಲ್ಲಿಂದ ಖರೀದಿ ಮಾಡಿ, ಬೆಲೆ ಜಾಸ್ತಿ ಇರುವ ದೇಶಕ್ಕೆ ಮಾರಾಟ ಮಾಡುತ್ತಾರೆ. ಇದನ್ನೇ ಅರ್ಬಿಟ್ರಾಜ್ ಎನ್ನುತ್ತಾರೆ. ಇಂದಿನ ಡಿಜಿಟಲ್ ಯುಗದಲ್ಲಿ, ಇದನ್ನು ಮನುಷ್ಯರಲ್ಲ, ಕಂಪ್ಯೂಟರ್‌ಗಳು (ಅರ್ಬಿಟ್ರಾಜ್ ಬಾಟ್ಸ್) ಕ್ಷಣಾರ್ಧದಲ್ಲಿ ಮಾಡುತ್ತವೆ. ಅಷ್ಟು ವೇಗವಾಗಿ ಬೆಲೆ ವ್ಯತ್ಯಾಸ ಮುಚ್ಚಲ್ಪಡಬೇಕು.

2026ರ ಜನವರಿ 29-30ರ ಹೊತ್ತಿಗೆ, ಅಮೆರಿಕದ ನ್ಯೂಯಾರ್ಕ್ ಮಾರುಕಟ್ಟೆಯಲ್ಲಿ ಚಿನ್ನ ಮತ್ತು ಬೆಳ್ಳಿಯ ಬೆಲೆಗಳು ಭಾರೀ ಇಳಿಕೆ ಕಂಡಿವೆ, ಆದರೆ ಅದೇ ಸಮಯದಲ್ಲಿ ಚೀನಾ, ಭಾರತ ಸೇರಿದಂತೆ ಇತರೆ ಕೆಲವು ಮಾರುಕಟ್ಟೆಗಳಲ್ಲಿ ಬೆಲೆಗಳು ಗಗನಕ್ಕೇರಿವೆ. ಈ ವ್ಯತ್ಯಾಸ ಸಹಜವಾಗಿಯೇ ಆಗಾಗ ಮುಗಿಯಬೇಕು. ಆದರೆ ಅದಾಗುತ್ತಿಲ್ಲ. ಅಂದರೆ, ಕಡಿಮೆ ಬೆಲೆ ಇರುವ ಅಮೆರಿಕದಿಂದ ಚಿನ್ನಬೆಳ್ಳಿ ಖರೀದಿ ಮಾಡಿ, ಹೆಚ್ಚು ಬೆಲೆ ಇರುವ ಚೀನಾಕ್ಕೆ ಕಳುಹಿಸುವ ಪ್ರಕ್ರಿಯೆ ನಡೆಯುತ್ತಿಲ್ಲ.

ಇದಕ್ಕೆ ಕಾರಣವೇನು? ಅಮೆರಿಕದ ಜೆಪಿ ಮಾರ್ಗನ್‌ನಂತಹ ದೊಡ್ಡ ಬ್ಯಾಂಕ್‌ಗಳು ಅಮೆರಿಕದ ಮಾರುಕಟ್ಟೆಯಲ್ಲಿ ಚಿನ್ನ ಮತ್ತು ಬೆಳ್ಳಿಯ ಬೆಲೆಯನ್ನು ಕೃತಕವಾಗಿ ತಗ್ಗಿಸಲು ಪ್ರಯತ್ನಿಸುತ್ತಿವೆ. ಆದರೆ ಜಾಗತಿಕ ಮಾರುಕಟ್ಟೆಯ ನಿಜವಾದ ಬೇಡಿಕೆ ಮತ್ತು ಒತ್ತಡವನ್ನು ನಿಯಂತ್ರಿಸಲು ವಿಫಲವಾಗುತ್ತಿವೆ. ಕಾಗದದ ವ್ಯವಹಾರಗಳ ಮೂಲಕ (ಫ್ಯೂಚರ್ಸ್, ಡೆರಿವೇಟಿವ್ಸ್) ಬೆಲೆ ಇಳಿಸಲು ಯತ್ನಿಸಿದರೂ, ಭೌತಿಕ ಚಿನ್ನಬೆಳ್ಳಿಗೆ ಇರುವ ಬೇಡಿಕೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಬೆಲೆಯನ್ನು ಮೇಲ್ಮುಖವಾಗಿಯೇ ತಳ್ಳುತ್ತಿದೆ.

ಉದಾಹರಣೆಗೆ, ನ್ಯೂಯಾರ್ಕ್‌ನಲ್ಲಿ ಬೆಳ್ಳಿಯ ಬೆಲೆ ಒಂದು ಹಂತದಲ್ಲಿ ಪ್ರತಿ ಔನ್ಸ್ 109-116ರೊಳಗೆ ಇಳಿದಿದ್ದರೆ, ಚೀನಾ ಮತ್ತು ಭಾರತದಲ್ಲಿ ಅದೇ ಬೆಳ್ಳಿ 120-135ಕ್ಕಿಂತಲೂ ಹೆಚ್ಚು ಬೆಲೆಗೆ ಮಾರಾಟವಾಗುತ್ತಿತ್ತು. ಚಿನ್ನದ ವಿಷಯದಲ್ಲೂ ಇದೇ ಕತೆ ಮುಂದುವರೆದಿತ್ತು. ಅಮೆರಿಕದಲ್ಲಿ ಬೆಲೆ ಇಳಿದರೂ, ಚೀನಾದ ಶಾಂಘೈ ಗೋಲ್ಡ್ ಎಕ್ಸ್ ಚೇಂಜ್‌ನಲ್ಲಿ ಮತ್ತು ಭಾರತೀಯ ಮಾರುಕಟ್ಟೆಯಲ್ಲಿ ಚಿನ್ನ ಇನ್ನೂ ಬಹಳ ದುಬಾರಿಯೇ ಇತ್ತು. ಇದು, ಜಾಗತಿಕ ಚಿನ್ನಬೆಳ್ಳಿ ಮಾರುಕಟ್ಟೆಗಳು ಈಗ ಒಂದೇ ರೀತಿಯಲ್ಲಿ ವರ್ತಿಸುತ್ತಿಲ್ಲ, ಭೌತಿಕ ಲೋಹದ ಬೇಡಿಕೆ ಇರುವ ದೇಶಗಳು (ಚೀನಾ, ಭಾರತ) ಮತ್ತು ಕಾಗದದ ಮಾರುಕಟ್ಟೆ ಮೇಲೆ ಅವಲಂಬಿತ ದೇಶಗಳ (ಅಮೆರಿಕ) ನಡುವೆ ಸ್ಪಷ್ಟ ಅಂತರ ಮೂಡುತ್ತಿದೆ ಎನ್ನುವುದನ್ನು ತೋರಿಸುತ್ತದೆ. ಈಗ ಈ ಅಸ್ಥಿರತೆಯ ಮಧ್ಯೆ ಇನ್ನೊಂದು ಭಯಾನಕ ಅಂಶ ಸೇರ್ಪಡೆಯಾಗಿದೆ. ಇರಾನ್ ಮತ್ತು ಅಮೆರಿಕಾ ನಡುವಿನ ಯುದ್ಧದ ಸಾಧ್ಯತೆ.

ಪರ್ಷಿಯನ್ ಗಲ್ಫ್ ಅನ್ನು ಅರೇಬಿಯನ್ ಸಮುದ್ರಕ್ಕೆ ಸಂಪರ್ಕಿಸುವ ಹಾರ್ಮುಜ್ ಕಣಿವೆ( ) ಎಂಬುದು ಜಗತ್ತಿನ ಅತ್ಯಂತ ಪ್ರಮುಖ ಸಾಗಣೆ ದಾರಿಗಳಲ್ಲಿ ಒಂದು. ಜಗತ್ತಿನ ಸುಮಾರು ಶೇ.2027 ತೈಲ ಮತ್ತು ಶೇ.20 ಎಲ್‌ಎನ್‌ಜಿ(ಗ್ಯಾಸ್) ಇದೇ ದಾರಿಯಿಂದ ಸಾಗುತ್ತದೆ. ಚೀನಾ, ಭಾರತ, ಜಪಾನ್, ದಕ್ಷಿಣ ಕೊರಿಯಾ ಮುಂತಾದ ಏಷ್ಯಾ ದೇಶಗಳು ಇದೇ ಮಾರ್ಗವನ್ನ ಅವಲಂಬಿಸಿವೆ. ಈಗ ಅಮೆರಿಕ ತನ್ನ ಯುದ್ಧನೌಕೆಯನ್ನು ಆ ಪ್ರದೇಶಕ್ಕೆ ಕಳುಹಿಸಿರುವುದರಿಂದ, ಯುದ್ಧವಾದರೆ ಹಾರ್ಮುಜ್ ಕಣಿವೆಯನ್ನು ಮುಚ್ಚಿಬಿಡುತ್ತೇವೆ ಎಂದು ಸ್ಪಷ್ಟವಾಗಿ ಇರಾನ್ ಎಚ್ಚರಿಸಿದೆ. ಇರಾನ್ ಈ ಮಾತನ್ನು ಕೇವಲ ಬೆದರಿಕೆಯಾಗಿ ಹೇಳುತ್ತಿಲ್ಲ. ಅದು ನೌಕಾಪಡೆ, ಡ್ರೋನ್‌ಗಳು, ಕ್ಷಿಪಣಿ ಬೋಟುಗಳು, ಮತ್ತು ಯುದ್ಧಾಭ್ಯಾಸಗಳ ಮೂಲಕ ತನ್ನ ಸಾಮರ್ಥ್ಯವನ್ನೂ ತೋರಿಸಿಕೊಳ್ಳುತ್ತಿದೆ.

ಒಂದೇ ದಿನಕ್ಕೆ ಈ ಕಣಿವೆ ಸಂಪೂರ್ಣ ಮುಚ್ಚಲ್ಪಡದಿದ್ದರೂ, ಸ್ವಲ್ಪ ಅಡಚಣೆ ಆದರೂ ಸಾಕು, ತೈಲದ ಬೆಲೆ ಪ್ರತಿ ಬ್ಯಾರೆಲ್‌ಗೆ 1020 ಏರಬಹುದು. ಪರಿಸ್ಥಿತಿ ಗಂಭೀರವಾದರೆ, ತೈಲದ ಬೆಲೆ 100120 ಮೀರಬಹುದು. ಇದರಿಂದ ಜಗತ್ತಿನಾದ್ಯಂತ ದುಬಾರಿ, ಮೌಲ್ಯವೃದ್ಧಿ (), ಕೈಗಾರಿಕಾ ವೆಚ್ಚ ಏರಿಕೆ, ಸರಕು ಸರಬರಾಜು ಅಸ್ತವ್ಯಸ್ತ ಎಲ್ಲವೂ ಸೇರಿ ಒಂದು ದೊಡ್ಡ ಆರ್ಥಿಕ ಹೊಡೆತ ಉಂಟಾಗುತ್ತದೆ. ಇಂಥ ಪರಿಸ್ಥಿತಿಯಲ್ಲಿ ಜನರು ಮತ್ತು ರಾಷ್ಟ್ರಗಳು ಚಿನ್ನ ಮತ್ತು ಬೆಳ್ಳಿಯತ್ತ ಮುಖ ಮಾಡುತ್ತವೆ. ಈ ಬೇಡಿಕೆಯೇ ಒಂದು ಹಂತದಲ್ಲಿ ಚಿನ್ನದ ಬೆಲೆಯ ಈ ಅಸಾಮಾನ್ಯ ಏರಿಕೆಗೆ ಕಾರಣ ಎನ್ನಬಹುದು.

ಹಳೆಯ ಕಾಲದಲ್ಲಿ ಸಂಕಷ್ಟ ಬಂದಾಗ ಹಣ ಅಮೆರಿಕದ ಡಾಲರ್ ಕಡೆ ಹರಿಯುತ್ತಿತ್ತು. ಆದರೆ ಈ ಬಾರಿ ಪರಿಸ್ಥಿತಿ ಬೇರೆ ಇದೆ. ಜನರು ಹಣಕ್ಕಿಂತ ನಿಜವಾದ ಲೋಹವನ್ನು ಹಿಡಿದಿಡಲು ಹೆಚ್ಚು ಆಸಕ್ತಿ ತೋರಬಹುದು. ಇದು ಹೀಗೆ ಮುಂದುವರೆದರೆ, ಚಿನ್ನ ಮತ್ತು ಬೆಳ್ಳಿಯ ಬೇಡಿಕೆ ಈಗಿರುವುದಕ್ಕಿಂತಲೂ ಹಲವು ಪಟ್ಟು ಹೆಚ್ಚಾಗುತ್ತದೆ ಎಂದು ಲ್ಯಾರಿ ಸಿ ಜಾನ್ಸನ್ ಅವರ ಲೇಖನವೊಂದು ಎಚ್ಚರಿಸಿದೆ.

ಇದರಿಂದ ಯಾರು ಲಾಭ ಪಡೆಯುತ್ತಾರೆ? ಚೀನಾ ಮತ್ತು ರಷ್ಯಾ. ಈ ಎರಡೂ ದೇಶಗಳು ಸೇರಿ ಜಗತ್ತಿನ ಸುಮಾರು 20% ಚಿನ್ನ ಉತ್ಪಾದಿಸುತ್ತವೆ. ಬೆಳ್ಳಿಯ ವಿಷಯದಲ್ಲೂ ಕೆಲವೇ ದೇಶಗಳು ಜಗತ್ತಿನ ಅರ್ಧಕ್ಕಿಂತ ಹೆಚ್ಚು ಉತ್ಪಾದಿಸುತ್ತಿವೆ. ಮೆಕ್ಸಿಕೋ, ಚೀನಾ ಮತ್ತು ಪೆರು. ಅಂದರೆ, ಲೋಹಗಳ ಮೇಲೆ ಹಿಡಿತ ಕೆಲವೇ ರಾಷ್ಟ್ರಗಳ ಕೈಯಲ್ಲಿದೆ. ಟ್ರಂಪ್ ಇನ್ನೂ ರಾಜತಾಂತ್ರಿಕ ಮಾರ್ಗವನ್ನು ಆಯ್ಕೆ ಮಾಡಬಹುದು, ಆದರೆ ಅದಕ್ಕೆ ಅವಕಾಶ ಕೇವಲ 20% ಮಾತ್ರ. ಉಳಿದ 80% ಸಾಧ್ಯತೆ ಯುದ್ದದತ್ತ ಸಾಗುತ್ತಿದೆ ಎಂದು ಅವರು ಆತಂಕ ವ್ಯಕ್ತಪಡಿಸುತ್ತಾರೆ.

ಅಮೆರಿಕನ್ ಡಾಲರ್‌ನ ಚಲನವಲನ ಕೂಡ ಚಿನ್ನದ ಬೆಲೆ ಏರಿಕೆಗೆ ಪ್ರಮುಖ ಕಾರಣವಾಗಿದೆ. ಚಿನ್ನದ ಅಂತಾರಾಷ್ಟ್ರೀಯ ವ್ಯಾಪಾರ ಡಾಲರ್‌ನಲ್ಲಿ ನಡೆಯುವುದರಿಂದ, ಡಾಲರ್ ದುರ್ಬಲವಾದಾಗ ಚಿನ್ನದ ಬೆಲೆ ಸ್ವಯಂಚಾಲಿತವಾಗಿ ಏರಿಕೆಯಾಗುತ್ತದೆ. ಇತ್ತೀಚಿನ ದಿನಗಳಲ್ಲಿ ಅಮೆರಿಕದ ಬಡ್ಡಿದರ ನೀತಿಗಳಲ್ಲಿ ಉಂಟಾದ ಅನಿಶ್ಚಿತತೆ, ಫೆಡರಲ್ ರಿಸರ್ವ್ ಬಡ್ಡಿದರ ಕಡಿತ ಮಾಡಬಹುದೆಂಬ ನಿರೀಕ್ಷೆಯಿಂದ ಡಾಲರ್ ಮೇಲಿನ ಒತ್ತಡ ಹೆಚ್ಚಾಯಿತು. ಬಡ್ಡಿದರಗಳು ಕಡಿಮೆಯಾದಾಗ ಬ್ಯಾಂಕ್ ಠೇವಣಿಗಳು ಮತ್ತು ಬಾಂಡ್‌ಗಳ ಆಕರ್ಷಣೆ ಕುಗ್ಗುತ್ತದೆ; ಹಾಗಾಗಿ ಚಿನ್ನವೇ ಆಗಾಗ್ಗೆ ಉತ್ತಮ ಹೂಡಿಕೆ ಆಯ್ಕೆಯಾಗಿ ಕಾಣಿಸುತ್ತದೆ. ಇದರ ಪರಿಣಾಮವಾಗಿ, ಹೂಡಿಕೆದಾರರ ಹಣ ಚಿನ್ನದತ್ತ ಹರಿದು, ಬೆಲೆ ಮತ್ತಷ್ಟು ಏರಿಕೆಯಾಗುತ್ತದೆ.

ಚಿನ್ನದ ಬೆಲೆ ತಕ್ಷಣವೇ ಕುಸಿಯಲಿದೆ ಎಂದು ಖಚಿತವಾಗಿ ಹೇಳಲು ಸಾಧ್ಯವಿಲ್ಲ. ಜಾಗತಿಕ ಅಸ್ಥಿರತೆ ಮುಂದುವರೆದರೆ, ಬಡ್ಡಿದರ ನೀತಿಗಳಲ್ಲಿ ಸ್ಪಷ್ಟತೆ ಬರದಿದ್ದರೆ, ಮತ್ತು ಕರೆನ್ಸಿ ಮಾರುಕಟ್ಟೆಗಳು ಅಲುಗಾಡುತ್ತಲೇ ಇದ್ದರೆ, ಚಿನ್ನದ ಮೇಲೆ ಇರುವ ಒತ್ತಡ ಕಡಿಮೆಯಾಗುವ ಸಾಧ್ಯತೆ ಕಡಿಮೆ. ಆದರೆ ಮಾರುಕಟ್ಟೆಗಳು ಯಾವಾಗಲೂ ಒಂದೇ ದಿಕ್ಕಿನಲ್ಲಿ ಸಾಗುವುದಿಲ್ಲವಲ್ಲ. ಮಧ್ಯಮಾವಧಿಯಲ್ಲಿ ಲಾಭದ ಸಂಗ್ರಹ ( ) ಅಥವಾ ಡಾಲರ್ ಬಲ ಪಡೆಯುವ ಸಂದರ್ಭಗಳಲ್ಲಿ ತಾತ್ಕಾಲಿಕ ಇಳಿಕೆಗಳೂ ಸಂಭವಿಸಬಹುದು. ಚಿನ್ನದ ಬೆಲೆ ಏರಿಕೆ ಕೇವಲ ಹೂಡಿಕೆದಾರರ ಲಾಭ-ನಷ್ಟದ ಪ್ರಶ್ನೆಯಲ್ಲ. ಚಿನ್ನ ದುಬಾರಿಯಾಗುತ್ತಿರುವಷ್ಟೂ, ಜಗತ್ತಿನ ಅನಿಶ್ಚಿತತೆ ಸ್ಪಷ್ಟವಾಗಿ ಗೋಚರಿಸುತ್ತಿದೆ. ಜನರು ಭವಿಷ್ಯದ ಮೇಲೆ ವಿಶ್ವಾಸ ಕಳೆದುಕೊಳ್ಳುವಾಗ, ಅವರು ಮತ್ತೆ ಮತ್ತೆ ಹಳೆಯ ಭದ್ರತೆಯ ಸಂಕೇತವಾದ ಚಿನ್ನದತ್ತ ಮರಳುತ್ತಾರೆ. ಈ ಕಾರಣಕ್ಕೇ ಚಿನ್ನದ ಬೆಲೆ ಏರಿಕೆಯನ್ನು ಕೇವಲ ಮಾರುಕಟ್ಟೆ ವಸ್ತುವಾಗಿ ನೋಡಲಾಗುವುದಿಲ್ಲ.

Printed and Published by: SUNDAR and Owned by: SUNDAR Printed at: SHILPA PUBLICATIONS AND PRINTING PRESS, No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Published at: No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Editor: SUNDAR